ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)

ಸಂಚಿಕೆ 4; ಸಂಪುಟ 13

ಭರತ ಕೌತುಕ –ಅಂಕಣ

ಮಯೂರ ನೃತ್ಯ

- ವಿದುಷಿ ರೋಹಿಣಿ ಸುಬ್ಬರತ್ನಂ

ವಿದುಷಿ ರೋಹಿಣಿ ಸುಬ್ಬರತ್ನಂ ನಾಡಿನ ಸುವಿಖ್ಯಾತ ವಿದ್ವಾಂಸರಾದ ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ ಅವರ ಸುಪುತ್ರಿ. ಉಪ್ಪಿನಂಗಡಿಯ ಕಾಂಚನ ಎಂಬ ಊರನ್ನು ಸಂಗೀತ ವಿಶ್ವವಿದ್ಯಾಲಯವಾಗಿ ಪರಿವರ್ತಿಸಿ ಗ್ರಾಮಕ್ಕೆ ಕಲೆಯ ಸಂಸರ್ಗದ ಮೂಲಕ ಮನ್ನಣೆ ತಂದುಕೊಟ್ಟ ಕಾಂಚನ ಸುಬ್ಬರತ್ನಂ ಅವರ ಪತ್ನಿ. ಅವರ ಮೂವರು ಸುಪುತ್ರಿಯರು ಶ್ರೀರಂಜಿನಿ, ಶ್ರುತಿರಂಜಿನಿ, ಸುಮನಸರಂಜಿನಿ ಸಂಗೀತಕಲಾವಿದರು. ನಾಡಿನ ಆಢ್ಯ ಸಂಗೀತ ಮನೆತನ ರೋಹಿಣಿಯಮ್ಮನವರದ್ದು.

ನೂಪುರ ಭ್ರಮರಿಯ ಆತ್ಮೀಯ ಬಳಗದವರಲ್ಲೊಬ್ಬರಾಗಿ ನಮ್ಮನ್ನು ಮುನ್ನಡೆಸುತ್ತಿರುವ ವಯೋವೃದ್ಧೆ, ಜ್ಞಾನವೃದ್ಧೆ ನಮ್ಮ ರೋಹಿಣಿಯಮ್ಮ. ಈಗಾಗಲೇ ವಾಟ್ಸಾಪ್ ಗುಂಪುಗಳಲ್ಲಿ ಅವರೀಯುತ್ತಿರುವ ಅನೇಕ ಕಲಾವಿಶೇಷ ವಿಚಾರಗಳು ಬಹುಮನ್ನಣೆಯನ್ನು ಪಡೆದಿವೆ. ಸಮಯದ ಅಭಾವದ ಜಂಜಾಟಗಳಲ್ಲಿ ಓದಿಗೆ ನಿಲುಕದೆಯೇ ಗ್ರಂಥಸ್ಥವಾಗಿ ಉಳಿದುಹೋಗುವ ಮತ್ತು ಸಮಕಾಲೀನ ಕಲಾಪರಂಪರೆಯನ್ನು ಪರಿಣಾಮವಕಾರಿಯಾಗಿ ಅರಿಯುವ ನಿಟ್ಟಿನಲ್ಲಿ ಅವಶ್ಯವಿರುವ ಅನೇಕ ಕುತೂಹಲಕಾರಿ ವಿಚಾರಗಳನ್ನು ಗ್ರಂಥಗಳಿಂದ ಆರಿಸಿ ಸುಲಭವಾಗಿ ತಲುಪುವಂತೆ ನೀಡುವ ಅವರ ಕಳಕಳಿ, ಪ್ರಯತ್ನ ಸ್ತುತ್ಯರ್ಹ. ಅವರನ್ನು ನೂಪುರದ ಅಂಗಳಕ್ಕೆಳೆಯುವುದರಿಂದ ನಮಗಾಗುವ ಅರಿವಿನ ಲಾಭ ಅನೇಕ. ಕಳೆದ ಮೂರು ಸಂಚಿಕೆಗಳಿಂದಲೂ **‘ಭರತಕೌತುಕ’** ಎಂಬ ಅಂಕಣದ ಮೂಲಕ ಪ್ರಾಚೀನ ಕಲಾವಿಷಯಗಳ ಕೌತುಕವನ್ನು ದರ್ಶನ ಮಾಡಿಸುತ್ತಿದ್ದಾರೆ. ಪ್ರಸ್ತುತ ಈ ಸಂಚಿಕೆಯಲ್ಲಿ ತಮ್ಮ ತಂದೆಯವರೂ, ಗುರುಗಳೂ ಆದ ಮಹಾಮಹೋಪಾಧ್ಯಾಯ ರಾ. ಸತ್ಯನಾರಾಯಣ ಶರ್ಮರಿಗೆ ಈ ಲೇಖನವನ್ನು ಸಮರ್ಪಿಸುತ್ತಿರುವ ಲೇಖಿಕೆಯವರು ಮಯೂರನೃತ್ಯಗಳ ಕುರಿತು ಸೋದಾಹರಣವಾಗಿ ಸಂಶೋಧನ ಲೇಖನ ಬರೆದಿದ್ದಾರೆ. ಅಧ್ಯಯನಾರ್ಥಿಗಳು ಸದುಪಯೋಗಪಡಿಸಿಕೊಳ್ಳಿರೆಂದು ಪ್ರಾರ್ಥನೆ.

‘ನಮಸ್ತಸ್ಮೈ ಗಣೇಶಾಯ ಯತ್ಕಂಠಃ ಪುಷ್ಕರಾಯತೇ ।

ಮದಾಭೋಗಘನಧ್ವಾನೋ ನೀಲಕಂಠಸ್ಯ ತಾಂಡವೇ ॥’

ಅನ್ವಯಾರ್ಥ : ನೀಲಕಂಠಸ್ಯ – ಕಂಠದಲ್ಲಿ ಧರಿಸಿದ್ದರಿಂದ ಕಪ್ಪಾದ ಕಂಠವುಳ್ಳ ಈಶ್ವರನ, ತಾಂಡವೇ – ತಾಂಡವವೆಂಬ ಉದ್ಧತನೃತ್ಯದಲ್ಲಿ, ಮದಾಭೋಗಘನಧ್ವಾನಃ – ಮದದ ಪರಿಪೂರ್ಣತೆಯಿಂದ ಗಂಭೀರವಾದ ಧ್ವನಿಯುಳ್ಳ, ಯತ್ಕಂಠಂ – ಯಾವ ಗಣೇಶನ ಕಂಠವು, ಪುಷ್ಕರಾಯತೇ – ಮೃದಂಗದಂತೆ ಆಚರಿಸುತ್ತಿದೆಯೋ (ಧ್ವನಿಗೈಯ್ಯುತ್ತಿದೆಯೋ!) ತಸ್ಮೈ – ಅಂತಹ, ಗಣೇಶಾಯ – ಗಣೇಶನಿಗೆ, ನಮಃ – ನಮಸ್ಕಾರ.

ತಾತ್ಪರ್ಯದ ವಿಶೇಷಾಂಶ – ಧನಂಜಯನು ರಚಿಸಿದ ‘ದಶರೂಪ’ ಗ್ರಂಥದಲ್ಲಿರುವ ಪ್ರಥಮ ಮಂಗಲಾಚರಣೆಯ ಶ್ಲೋಕವಿದು. ಈಶ್ವರನು ಮಾಡುವ ತಾಂಡವವೆಂಬ ಉದ್ಧತನೃತ್ಯದಲ್ಲಿ ಗಂಭೀರವಾದ ನಿನಾದದಿಂದ ಗಣೇಶನು ಮೃದಂಗದಂತೆ ಧ್ವನಿ ಮಾಡುತ್ತಿದ್ದಾನೆ. ಅಂತಹ ಗಣೇಶನನ್ನು ಗ್ರಂಥಕರ್ತನು ನಮಸ್ಕರಿಸಿದ್ದಾನೆ. ಶ್ಲೇಷಾರ್ಥವುಳ್ಳ ಈ ಶ್ಲೋಕದಲ್ಲಿ ನೀಲಕಂಠ ಎಂದರೆ ನವಿಲು, ಘನಧ್ವಾನ ಎಂದರೆ ಮೋಡದ ಘರ್ಜನೆ ಎಂದು ಅರ್ಥವಿದೆ. ಮೋಡದ ಗುಡುಗನ್ನು ಕೇಳಿದಾಗ ನವಿಲು ಕುಣಿಯುತ್ತದೆ

ಎಂಬ ಕವಿಸಮಯವಿದೆ. ಮೇಘಧ್ವನಿಯನ್ನು ಕೇಳಿ ಮಯೂರವು ತಾಂಡವ ನೃತ್ಯ ಮಾಡುವಂತೆ ಎಂದು ಶ್ಲೋಕದ ಉತ್ತರಾರ್ಧದಲ್ಲಿ ಖಂಡಶ್ಲೇಷದಿಂದ ಉಪಮೆಯ ಛಾಯೆಯು ತೋರುತ್ತದೆ.

'ಮಯೂರಾ ನೃತ್ಯಂತೋ ಮೇಘಾಗಮೇ ಸಮಂತತಃ ॥

(ಭರತಮುನಿಯ ನಾಟ್ಯಶಾಸ್ತ್ರ – 'ಮೇಘಗಳು ಆವರಿಸಿದ್ದಕ್ಕೆ ನವಿಲುಗಳು ಸುತ್ತಲೂ ಕುಣಿಯುತ್ತಿವೆ' – ಪ್ರತಿಷ್ಠಾ ಛಂದಸ್ಸಿನ ವಿಜಯಾ ವೃತ್ತದ ಧ್ರುವಾದ ಪಾದವೊಂದಿದು).

ಭಾರತದಲ್ಲಿ ಶಿಷ್ಟ ರಂಗಭೂಮಿ ಕಲೆಗಳ ಆಶಯಗಳು, ಉದ್ದೇಶಗಳು, ರೀತಿಗಳು ರಾಜರ ಆಡಳಿತ, ಆಕ್ರಮಣ ಮುಂತಾದ ಕಾರಣಗಳಿಂದ ಕಾಲದಿಂದ ಕಾಲಕ್ಕೆ ಬದಲಾಗುತ್ತ, ವ್ಯತ್ಯಾಸವಾಗುತ್ತಾ, ಪರಮತಗಳ ಪ್ರಭಾವಗಳು ಅನೇಕವಾದರೂ, ತಮ್ಮ ಜೀವನಕ್ಕೆ ಉಪಯುಕ್ತವಾದದ್ದನ್ನೆಲ್ಲ ದೇವರೆಂದೇ ಅಥವಾ ದೇವರು ಕಳುಹಿಸಿದ ಭಾಗ್ಯವೆಂದೇ ನಂಬಿ ಆರಾಧಿಸುತ್ತ ಬಂದ ಜನಪದರ ಜಾನಪದ ಗೀತ – ನೃತ್ಯಗಳೆಷ್ಟೋ ತಮ್ಮ ದೈವಾರಾಧನೆಯ ಅಂಗವಾಗಿದ್ದ ತಮ್ಮ ಕಲೆಗಳ ಸ್ವರೂಪವನ್ನು ಉಳಿಸಿಕೊಂಡು ಬಂದವು. ಹಾಗೆಂದೇ ಭಾರತೀಯ ಸಂಗೀತಶಾಸ್ತ್ರಜ್ಞರು ಪ್ರಾಚೀನದಿಂದಲೂ ತಮ್ಮ ಶಾಸ್ತ್ರಗ್ರಂಥಗಳಲ್ಲಿ ಮಾರ್ಗ ಸಂಗೀತ – ನೃತ್ಯಾದಿಗಳೊಂದಿಗೆ ದೇಶೀ ಸಂಗೀತ – ನೃತ್ಯಗಳನ್ನೂ ಹೇಳುತ್ತಲೇ ಬಂದಿದ್ದಾರೆ. ದೇಶೀ ಸಂಗೀತನರ್ತನಾದಿಗಳಲ್ಲಿ ಆಯಾ ಕಾಲದಲ್ಲಿ, ಆಯಾ ಪ್ರಾಂತೀಯ ದೇಶೀ ಜನಪದರಲ್ಲಿ ಪ್ರಯುಕ್ತವಾಗುತ್ತಿದ್ದ ಸಂಗೀತ ನರ್ತನಾದಿಗಳನ್ನೆಷ್ಟೋ ವರ್ಣಿಸಿದ್ದಾರೆ. ಅದರಲ್ಲಿ ಮಯೂರನೃತ್ಯವೂ ಒಂದು.

ಮಯೂರದ ಪರ್ಯಾಯ ನಾಮಗಳು

ಭಾರತಾದ್ಯಂತ ವಿವಿಧ ಭಾಷೆಗಳಲ್ಲಿ ನವಿಲು ಅನೇಕ ಹೆಸರುಗಳನ್ನು ಹೊಂದಿದೆ. ಸಂಸ್ಕೃತದಲ್ಲಿ 'ಮಯೂರ, ಭುಜಂಗಭುಕ್ ಅಥವಾ ಭುಜಂಗಭೋಗಿನ್, ಮೇಘನಂದ, ಶಿಖಿವಾಲ, ಚಂದ್ರಕಿನ್, ನೀಲಕಂಠ, ಕೇಕಿನ್, ಶಿಖಂಡಿನ್, ಚಿತ್ರಪಿಚ್ಛಕ' ಇತ್ಯಾದಿ ಅನೇಕ ಹೆಸರುಗಳು ನವಿಲಿಗಿವೆ. ವಿಷಯುಕ್ತ ಸರ್ಪಗಳನ್ನು ತಿನ್ನುವುದರಿಂದ, ಈ ಪಕ್ಷಿಯ ಕುತ್ತಿಗೆಯು ಶಿವನಂತೆ ನೀಲಿಯಾಗಿದೆಯೆಂದು ಮಯೂರಕ್ಕೆ 'ನೀಲಕಂಠ'ನೆಂಬ ಹೆಸರು. ಹಿಂದಿ, ಉರ್ದು, ಪಂಜಾಬಿ, ಗುಜರಾತಿ, ಮತ್ತು ಮರಾಠಿಗಳಲ್ಲಿ 'ಮೋರ್' ಎಂದೂ, ತೆಲುಗಿನಲ್ಲಿ 'ನೇಮಲಿ' ಎಂದೂ, ತಮಿಳು, ಮಲಯಾಳಗಳಲ್ಲಿ 'ಮಯಿಲ್' ಎಂದೂ, ಬೆಂಗಾಲೀ ಮತ್ತು ಒರಿಸ್ಸಾ ಭಾಷೆಗಳಲ್ಲಿ 'ಮಯೂರ್'ವೆಂದೂ, ಮಣಿಪುರಿಯಲ್ಲಿ 'ಬಾಹೌದ್' ಎಂದೂ ಭೂಟಿಯಾದಲ್ಲಿ 'ಮಂಜ' ಅಥವಾ 'ಮೇಜ'ವೆಂದೂ ರಾಜಸ್ತಾನೀ ಭಾಷೆಯಲ್ಲಿ 'ಮೋರ್ಲ' ಎಂದೂ ಸಿಂಧೀಯಲ್ಲಿ 'ಮುರ್' ಎಂದೂ ಕರೆಯುತ್ತಾರೆ. ನೇಪಾಳೀಯಲ್ಲಿ 'ಮಜೂರ್' ಎಂದೂ, ಸಿಂಹಳೀಯದಲ್ಲಿ 'ಮೊನರಾ' ಎಂದೂ ಪರ್ಶಿಯನ್ ಭಾಷೆಯಲ್ಲಿ 'ಟಾವುಸ್' ಎಂದೂ, ಫ್ರೆಂಚ್‌ನಲ್ಲಿ 'ಪಿಯೊನ್' ಎಂದೂ ಲ್ಯಾಟಿನ್ ಹಾಗೂ ಗ್ರೀಕ್ ಭಾಷೆಗಳಲ್ಲಿ 'ಪಾವೊ' ಎಂದೂ , ಇಂಗ್ಲಿಷ್‌ನಲ್ಲಿ ಪಿಕಾಕ್ ಎಂದೂ ಕರೆಯುತ್ತಾರೆ.

ಕಾವ್ಯ– 'ಮಯೂರ ಸಂದೇಶ'

ತನ್ನ ಸೌಂದರ್ಯದಿಂದಲೂ ಕಥಾವಸ್ತುಗಳಿಂದಾಗಿಯೂ ಸಾಮಾನ್ಯವಾಗಿ ಎಲ್ಲ ಕಾವ್ಯಗಳಲ್ಲಿಯೂ, ಲಲಿತಕಲೆಗಳಲ್ಲಿಯೂ ಮಯೂರವು ಕಂಡುಬರುತ್ತದೆ. ಸೌಂದರ್ಯ ಹಾಗೂ ಅರಣ್ಯವನಗಳ ಕುರುಹಾಗಿರುವ ನವಿಲಿನ ನಡಿಗೆ, ನಾಟ್ಯ, ಕೊರಳಿನ ಕೊಂಕು, ಸಾಸಿರ ಕಣ್ಣುಗಳು, ಅದರ ವರ್ಣರಂಜಿತ ದೇಹ– ಇತ್ಯಾದಿಗಳು ಕವಿಗಳ ಕಾವ್ಯರಚನೆಗೆ, ಸ್ತ್ರೀಯರ ಸೌಂದರ್ಯ ವರ್ಣನೆಗೆ, ಶ್ರೇಷ್ಠವಾದ ರಸಮಯ ವಸ್ತುವಿಶೇಷ. ನಾಟ್ಯಕ್ಕೂ ಅದಕ್ಕೆ ಸಂಬಂಧಿಸಿದ ಕಥೆಗಳಿಗೂ ಭಂಡಾರ. ವಾಲ್ಮೀಕಿ, ಕಾಳಿದಾಸ, ಶೂದ್ರಕ ಮುಂತಾದವರೆಲ್ಲರೂ ತಮ್ಮ ಕಾವ್ಯಗಳಲ್ಲಿ ಮಯೂರವನ್ನು ಹೇಳಿದ್ದಾರೆ. ಉದಯನು ಮಯೂರಸಂದೇಶವೆಂಬ ಹಾಗೂ ಮುನಿಧುರಂಧರನು ಮಯೂರದೂತವೆಂಬ ಕಾವ್ಯಗಳನ್ನೇ ರಚಿಸಿರುವುದು ವಿಶೇಷ. ಸಿಂಹಳೀಯ ಭಾಷೆಯಲ್ಲಿಯೂ ಮಹಾವಿದ್ವಾಂಸನಾಗಿದ್ದ ಗುರುಲುಗೊಮಿಯ ಮೊಮ್ಮಗ ಕವೀಶ್ವರನೆಂಬುವವನು ಕಾಳಿದಾಸನ ಹಂಸಸಂದೇಶ ಕಾವ್ಯದಿಂದಲೇ ಸ್ಫೂರ್ತಿಗೊಂಡು ಮಿಯೂರಸಿಂದೇಸವೆಂಬ ದೂತಕಾವ್ಯವನ್ನು ರಚಿಸಿದ್ದಾನೆ, ಮಿಯೂರಸಿಂದೇಸವು ನಂತರದ ಕಾಲದಲ್ಲಿ ಸಂಸ್ಕೃತೀಕರಣಗೊಂಡು ಮಯೂರ ಸಂದೇಶವೆಂದಾಯಿತೆಂದು ವಿದ್ವಾಂಸರು ಹೇಳುತ್ತಾರೆ.

ಉದಯಕವಿಯು 15ನೆಯ ಶತಮಾನದವನು. ಕಾಳಿದಾಸನ ಮೇಘದೂತ ಕಾವ್ಯದಿಂದ ಸ್ಫೂರ್ತಿಪಡೆದು ಮಯೂರ ಸಂದೇಶವನ್ನು ರಚಿಸಿದವನು. ಈ ಕಾವ್ಯವು ಪೂರ್ವ ಹಾಗೂ ಉತ್ತರ ಭಾಗಗಳಾಗಿ ವಿಂಗಡನೆಯಾಗಿದ್ದು 107 ಮತ್ತು 92 ಶ್ಲೋಕಗಳನ್ನು ಹೊಂದಿದೆ. ಪ್ರಥಮ ಶ್ಲೋಕವು ಮಾಲಿನೀ ವೃತ್ತದಲ್ಲಿದ್ದು ಗಣೇಶ ಸ್ತುತಿಯಾಗಿದೆ. ಉಳಿದವೆಲ್ಲ ಮಂದಾಕ್ರಾಂತ ವೃತ್ತದಲ್ಲಿ ರಚಿಸಲ್ಪಟ್ಟಿವೆ. ಕಾವ್ಯವಸ್ತುವು ಹೀಗಿದೆ : ನಾಯಕನು ವಿದ್ಯಾಧರನಿಂದ ಅಪಹರಿಸಲ್ಪಟ್ಟ ತನ್ನ ಪ್ರಿಯತಮೆಗೆ ಮಯೂರದ ಮೂಲಕವಾಗಿ ಸಂದೇಶವನ್ನು ಕಳುಹಿಸಿದ್ದು. ಮಾಲಾಬಾರಿನ(ಈ ರೀತಿಯ ನಾಮವೂ ಈಗ ಬದಲಾಗಿದೆ) ರಾಜನ ಸಂಬಂಧಿಕ

ರಾಜನೊಬ್ಬನು ತನ್ನ ರಾಣಿಯೊಂದಿಗೆ ಪಯಣಿಸುತ್ತಿದ್ದಾಗ ವಿದ್ಯಾಧರನೊಬ್ಬನು ಆತನನ್ನು ನೋಡಿ ಸಾಕ್ಷಾತ್ ಶಿವನೆಂದೇ ಭ್ರಮಿಸಿಬಿಟ್ಟನು. ಇದನ್ನು ನೋಡಿ ರಾಜಸಂಬಂಧಿಯು ನಕ್ಕುಬಿಟ್ಟಿದ್ದರಿಂದ ಕೋಪಗೊಂಡ ವಿದ್ಯಾಧರನು ಈ ರಾಜಸಂಬಂಧಿಯು ತನ್ನ ಪತ್ನಿಯಿಂದ ಒಂದು ತಿಂಗಳ ಕಾಲ ಅಗಲಿಕೆಯಿಂದಿರಲಿ ಎಂದು ಶಪಿಸಿದನು. ರಾಜನು ವಿದ್ಯಾಧರನ ಕ್ಷಮೆಯನ್ನೂ ಕರುಣೆಯನ್ನೂ ಬಹುವಾಗಿ ಬೇಡಿದ್ದರಿಂದ ವಿದ್ಯಾಧರನು ಆತನನ್ನು ಕೇರಳದ ಶ್ಯಾನಂದೂರದಲ್ಲಿಯೆ ನೆಲೆಸಲು ಒಪ್ಪಿಗೆಯನ್ನು ನೀಡಿದನು. ರಾಜನು ವಿರಹವನ್ನು ತಡೆಯಲಾರದೆ ತನ್ನ ಸಂದೇಶವನ್ನು ಮಯೂರದ ಮೂಲಕ ಕಳುಹಿಸಲು ನಿರ್ಧರಿಸಿದನು. ಈ ಕಾವ್ಯವು ಬಹಳ ಭಾವನಾತ್ಮಕವಾಗಿದ್ದು ಕಾವ್ಯರಚನೆಯ ಸಮಯದಲ್ಲಿದ್ದ ಕೇರಳದ ರಾಜಕೀಯ ಹಾಗೂ ಭೌಗೋಳಿಕ ಸ್ಥಿತಿ – ಗತಿಗಳನ್ನು ಕುರಿತಾದ ಮಾಹಿತಿಗಳನ್ನು ನೀಡುತ್ತದೆಂದು ಸಂಶೋಧಕರು ಹೇಳುತ್ತಾರೆ. ಭಾರತವು ಮಾತ್ರವಲ್ಲದೆ ಪ್ರಾಚೀನ ಗ್ರೀಕ್, ರೋಮ್, ಈಜಿಪ್ಟ್‌ಗಳ ಸಾಹಿತ್ಯಗಳಲ್ಲಿಯೂ ಮಯೂರವನ್ನು ಕುರಿತಾದ ಸಾಕಷ್ಟು ಉಲ್ಲೇಖಗಳಿವೆ.

ಮಯೂರವನ್ನು ಕುರಿತಾದ ದೈವಿಕ ನಂಬುಗೆಗಳು–

ಭಾರತದಲ್ಲಿ ನವಿಲು ರಾಷ್ಟ್ರಪಕ್ಷಿ.ಮಯೂರವು ವರ್ಣರಂಜಿತವಾದ ಅತ್ಯಂತ ಸುಂದರವಾದ ಪಕ್ಷಿಯಾಗಿದ್ದು, ಅವು ಸಮೃದ್ಧಿ, ಸಂತಾನಕಾರಕ, ದೀರ್ಘಾಯು, ಪ್ರೀತಿಗಳ ದ್ಯೋತಕವಾಗಿದೆ. ಅವುಗಳ ಗರಿಗೆದರಿ ಕುಣಿಯುವಿಕೆಯು ಆತ್ಮಪ್ರತ್ಯಯದ, ಹೆಮ್ಮೆಯ, ಗರ್ವದ ದ್ಯೋತಕವೂ ಆಗಿದ್ದು, ಯಾವುದೇ ಶುಭಕರ ಕಾರ್ಯಗಳಲ್ಲಿ ಅವು ಶುಭಶಕುನವೆಂಬ ನಂಬಿಕೆಗಳು ಅನೇಕ ಧರ್ಮ – ಮತಗಳಲ್ಲಿಯೂ ಪರಿಗಣಿಸಲ್ಪಟ್ಟಿದೆ. ಆದ್ದರಿಂದಲೇ ದೇವಾಲಯಗಳಲ್ಲಿ, ರಾಜವನಗಳಲ್ಲಿ ಅವುಗಳ ಚಿತ್ರ ಹಾಗೂ ಶಿಲ್ಪಗಳು ಇರುತ್ತವೆ.

ನವಿಲು ಪುರಾಣಪ್ರಸಿದ್ಧವಾದದ್ದು. ವಿದ್ಯಾಧಿದೇವತೆಯಾದ ಸರಸ್ವತಿಯ ವಾಹನ. ಋಗ್ವೇದ, ರಾಮಾಯಣ, ಮಹಾಭಾರತಗಳಲ್ಲಿಯೂ ಈ ಪಕ್ಷಿಯ ಉಲ್ಲೇಖಗಳಿವೆ. ಯುದ್ಧದೇವತೆ ಕಾರ್ತಿಕೇಯನು ಶೂರಪದ್ಮನೊಂದಿಗೆ ಯುದ್ಧವನ್ನು ಮಾಡುವಾಗ ಮಾಯಾವಿಯಾದ ಈ ರಕ್ಕಸನು ಒಂದು ಮಾವಿನಮರವಾದನಂತೆ! ಮುರುಗನು ತನ್ನ ವೇಲಾಯುಧದಲ್ಲಿ ಮರವನ್ನು ಸೀಳಿದಾಗ ಒಂದು ಭಾಗವು ಕುಕ್ಕುಟವೂ ಇನ್ನೊಂದು ಭಾಗವು ಮಯೂರವೂ ಆಯಿತಂತೆ ! ಸ್ಕಂದನು ಕುಕ್ಕುಟವನ್ನು ತನ್ನ ಧ್ವಜವನ್ನಾಗಿಯೂ ಮಯೂರವನ್ನು ತನ್ನ ವಾಹನವನ್ನಾಗಿಯೂ ಮಾಡಿಕೊಂಡನೆಂದೂ, ಈ ಮಯೂರದ ಹೆಸರು 'ಪರವಣಿ'ಯೆಂದೂ ಉಪಾಖ್ಯಾನ. ಹಾಗೆಂದೇ ಮುರುಗ ಭಕ್ತರು ಪಳನಿ ಯಾತ್ರೆಯ ತಮ್ಮ ಕಾವಡಿ ಹೊರುವ ಸೇವೆಯಲ್ಲಿ ಕಾವಡಿಯನ್ನು ನವಿಲುಗರಿಗಳಿಂದ ಸಿಂಗರಿಸುತ್ತಾರೆ.

ದೇವರಾಜನಾದ ಇಂದ್ರನಿಗೆ ನವಿಲಿನಂತೆ ಮೈಯೆಲ್ಲ ಕಣ್ಣುಗಳಿದ್ದು ನವಿಲಿನ ರೂಪವನ್ನು ಧರಿಸುತ್ತಾನೆ – ಎಂಬಿವೇ ನಂಬಿಕೆಗಳು ಭಾರತದಲ್ಲಿವೆ ! ಅಲ್ಲದೆ, ಇಂದ್ರನು ಲಂಕೆಯ ಒಡೆಯನಾದ ರಾವಣನೊಂದಿಗೆ ಯುದ್ಧವನ್ನು ಮಾಡುವ ಸಮಯದಲ್ಲಿ ಆತನಿಗೆ ಅಪಾಯ ಉಂಟಾಗುವ ಸಮಯದಲ್ಲೆಲ್ಲ ಮಯೂರವು ತನ್ನ ರೆಕ್ಕೆಬಿಚ್ಚಿ, ಅಡ್ಡಗಟ್ಟಿ ರಕ್ಷಿಸುತ್ತಿತ್ತಂತೆ! ಇದರಿಂದ ಸಂತಸಗೊಂಡ ಇಂದ್ರನು ನವಿಲಿನ ರೆಕ್ಕೆಗಳಿಗೆ ಆಕರ್ಷಕವಾದ ಬಣ್ಣಗಳನ್ನು ನೀಡಿ ಅಲಂಕರಿಸಿದನಂತೆ. ಮಳೆಯ ಮೇಘಗಳಿಗೆ ದೊರೆಯು ಇಂದ್ರನೇ ತಾನೇ! ಮಳೆಯ ಮೇಘಗಳು ಆಗಸದಲ್ಲಿ ನೆರೆದರೆ ತಮ್ಮ ಇಂದ್ರನೇ ಬಂದನೆಂಬ ಹರ್ಷದಿಂದ ಮಯೂರಗಳು ನರ್ತಿಸುತ್ತವಂತೆ! ಸಮುದ್ರಮಂಥನದ ಕಾಲದಲ್ಲಿಯೂ ಮಯೂರವು ಮಥನಕಾಲದಲ್ಲಿ ಉಂಟಾದ ಋಣಾತ್ಮಕ ಅಂಶಗಳನ್ನೆಲ್ಲ ಹೀರಿಕೊಂಡು ನುಂಗಿಬಿಟ್ಟಿತೆಂದು ಜನಪದರ ನಂಬಿಕೆ. ಇಂತಹ ಕಥೆಗಳಿಂದಲೂ ಸರ್ಪವೈರಿಯಾದ್ದರಿಂದಲೂ ನವಿಲು ಶುಭವೆಂದೂ, ಕೃಷಿಕನ ಸ್ನೇಹಿತನೆಂದು ಜನಪದರರು ನಂಬುತ್ತಾರೆ. ಅದರ ರೆಕ್ಕೆ ಪುಕ್ಕಗಳನ್ನು ಮಂತ್ರಿಸಿ ಮೈ ಕೈಕಾಲುಗಳಿಗೆ ಕಟ್ಟಿದರೆ ನೋವುಗಳು ಗುಣವಾಗುತ್ತದೆಂದೂ ಇತ್ಯಾದಿ ನಂಬಿಕೆಗಳು ಕೃಷಿಕರಾದ ಹಳ್ಳಿಗರಿಗೂ, ಆದಿವಾಸಿಗಳಿಗೂ ಇವೆ. ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಸಮಯದಲ್ಲಿ ಅವರ ಸಿಪಾಯಿಗಳು ಜನಪದಕ್ಕೆ ನವಿಲಿನೊಂದಿಗಿನ ಇರುವ ಭಾವನಾತ್ಮಕ ಸಂಬಂಧಗಳು ತಿಳಿಯದೆ ಗುಂಡು ಹಾರಿಸಿ ಹತ್ಯೆಯನ್ನು ಮಾಡಿದಾಗ ಅನೇಕ ಘರ್ಷಣೆಗಳು ಹಳ್ಳಿಗರ ಮತ್ತು ಈ ಸಿಪಾಯಿಗಳ ಮಧ್ಯೆ ಸಂಭವಿಸುತ್ತಿದ್ದವು.

ಮಹಾಮಾಯೂರೀ ವಿದ್ಯಾರಾಜ್ಞೀ ಎಂಬ ದೇವತೆಯು ಬೌದ್ಧರ ಮಹಾಯಾನದ ದೇವತೆಯಾಗಿದ್ದು ಜಪಾನಿನಲ್ಲಿ ಈ ದೇವತೆಯನ್ನು ಕುಜಕು ಮ್ಯೋ–ಓ ಎನ್ನುತ್ತಾರೆ. ಈ ದೇವತೆಯು ವಿಷಹಾರಿಣಿಯೆಂಬ ನಂಬುಗೆ ಇದೆ. ನೇಪಾಳದಲ್ಲಿ ಈ ದೇವತೆಯು ವಿದ್ಯೆಗೆ ರಾಜದೇವತೆಯಾಗಿದ್ದು ಪಂಚರಕ್ಷಾದೇವಿಯಲ್ಲೊಬ್ಬಳಾಗಿದ್ದಾಳೆ.

ಇಸ್ಲಾಂ ಧರ್ಮದ ಒಂದು ದಂತಕಥೆಯಲ್ಲಿ ನವಿಲು ಸ್ವರ್ಗದ ಬಾಗಿಲೂ ಆಗಿದೆ! ನೂರಾರು ಕಣ್ಣುಗಳಿರುವ ಪಕ್ಷಿಯೆಂದೇ ಹೆಸರಾದ ಮಯೂರದ ಕಣ್ಣುಗಳು ವಿಶ್ವದ ಸೂರ್ಯ – ಚಂದ್ರ – ತಾರೆಗಳನ್ನು ಪ್ರತಿನಿಧಿಸುತ್ತವೆಂದೂ, ಅದರ ಮಾಂಸಲವು ಕೊಳೆಯದೆ ಅಮರತ್ವವನ್ನು ಪ್ರತಿಪಾದಿಸುತ್ತದೆಂದೂ, ಎಲ್ಲವನ್ನೂ ನೋಡಿ ಗಮನಿಸುವಂತಹ ಚರ್ಚು ಅದೆಂದೂ, ಕ್ರೈಸ್ತರು ನಂಬುತ್ತಾರೆ! ಗ್ರೀಕ್ ಮತ್ತು ರೋಮನ್ ಪುರಾಣ ದಂತಕಥೆಗಳಲ್ಲಿ ನವಿಲು ದೇವಮುಖ್ಯಸ್ಥರಾದ ಹೀರಾ ಹಾಗೂ ಜ್ಯೂನೋಗಳ ಪ್ರಿಯ ಪಕ್ಷಿಯಾಗಿದ್ದು, ಹೀರಾಳು ಅವಳ ನೂರು ಕಣ್ಣುಗಳುಳ್ಳ ಅಂಗರಕ್ಷಕನಾದ ಆರ್ಗಸ್‌ನ ಕಣ್ಣುಗಳಿಂದ ಮಯೂರವನ್ನು ಸೃಷ್ಟಿಸಿದಳೆಂಬ ದಂತಕಥೆಯಿದೆ.

ನವಿಲು ವರ್ಷಕಾಲದಲ್ಲಿ ನರ್ತಿಸುತ್ತದೆಂದೂ ನಂಬಿಕೆಯಿದ್ದ ಕಾರಣ ಒಂದು ಕಾಲದಲ್ಲಿ ಭೂಮಿ, ಸ್ತ್ರೀಯರು ಮತ್ತು ಪ್ರಾಣಿಗಳ ಫಲವತ್ತತೆಗಾಗಿ ನವಿಲುಗಳನ್ನು ಬಲಿಕೊಡಲಾಗುತ್ತಿತ್ತು. ಪ್ರಾಚೀನ ಚೀನಾದಲ್ಲಿ ಮಯೂರದ ಒಂದು ದೃಷ್ಟಿಯು ಸ್ತ್ರೀಯನ್ನು ಗರ್ಭವತಿಯಾಗಿಸುತ್ತದೆಂಬ ನಂಬುಗೆಯಿದ್ದಿತು! ನವಿಲು ಚೀನಾದವರಿಗೆ ಪವಿತ್ರ ಪಕ್ಷಿ. ಬೌದ್ಧರಿಗೂ ಮಯೂರವು ಪವಿತ್ರತೆಯನ್ನು ಬಿಂಬಿಸುವ ಪಕ್ಷಿಯಾಗಿದ್ದು ಶುದ್ಧೀಕರಿಸುವ ಪವಿತ್ರಕ್ರಿಯೆಗಳಿಗೆ ನವಿಲುಗರಿಗಳನ್ನು ಬಳಸುತ್ತಾರೆ. ಇಸ್ಲಾಂ ಧರ್ಮದಲ್ಲಿಯೂ ಇದೇ ಪದ್ಧತಿಯನ್ನು ಅನ್ವಯಿಸಿಕೊಂಡಿದ್ದಾರೆ. ಆದರೆ ಇವೆಲ್ಲ ನಂಬಿಕೆಗಳಿಗೂ ವಿರುದ್ಧವಾಗಿ ಯೂರೋಪ್ ಖಂಡದಲ್ಲಿ ನವಿಲಿನ ಕೂಗು, ಅವುಗಳ ರೆಕ್ಕೆ ಪುಕ್ಕಗಳನ್ನು ಬಹಳ ಅಶುಭಕಾರಕ ಶಕುನವಾಗಿ ಪರಿಗಣಿಸಲ್ಪಡುತ್ತದೆ!

ಭಾರತದಲ್ಲಿ ಮಯೂರನೃತ್ಯ

ಮುಂಗಾರಿನ ಮಳೆಯ ಆಗಮನದ ಸಮಯದಲ್ಲಿ ಅಮೃತವರ್ಷದಿಂದ ಭೂಮಿತಾಯಿಯು ಹಸಿರುಡುಗೆಯನ್ನುಟ್ಟಾಗ, ಈ ಸಂತಸದ ಸಮಯದಲ್ಲಿ ನವಿಲು ನರ್ತಿಸುವಂತಹುದಾಗಿದ್ದು, ಮಯೂರನೃತ್ಯವು ವರ್ಷಕಾಲದ ಸಮೃದ್ಧಿಯ ದ್ಯೋತಕವಾಗಿದೆ. ಅಲ್ಲದೆ ಇದು ರಾಧಾ – ಮಾಧವರ ಪ್ರೇಮದ ದ್ಯೋತಕವೂ ಆಗಿದ್ದು ಕೃಷ್ಣನು ತನ್ನ ಪ್ರಿಯತಮೆಯಾದ ರಾಧೆಯನ್ನು ಸಂತೋಷಗೊಳಿಸುವ ಸಲುವಾಗಿ ತಾನೇ ಮಯೂರವಾಗಿ ಮಾರ್ಪಟ್ಟು ನರ್ತಿಸುತ್ತಾನೆಂದು ನಂಬಿಕೆಯಿದೆ ! ರಾಧೆಯೂ ಕೃಷ್ಣನೊಂದಿಗೆ ಸಂತೋಷದಿಂದ ಈ ನೃತ್ಯದಲ್ಲಿ ಪಾಲ್ಗೊಳ್ಳುತ್ತಾಳೆ! ಶ್ರೀಕೃಷ್ಣನ ಜನ್ಮಸ್ಥಳವಾದ ಮಥುರಾ ಹಾಗೂ ಆಸುಪಾಸಿನಲ್ಲಿ ನರ್ತಕ – ನರ್ತಕಿಯರು ಪೂರ್ಣವಾಗಿ, ನವಿಲಿನ ಗರಿಗಳನ್ನು ಅಲಂಕರಿಸಿ, ನವಿಲಿನಂತೆ ವೇಷ ಧರಿಸುತ್ತಾರೆ. ಈ ನೃತ್ಯವು ತಲೆಯ ಕೊಂಕು, ಕೈಕಾಲುಗಳ ಲಾಲಿತ್ಯಪೂರ್ಣ ಚಲನೆಗಳಿಂದಲೂ, ಬಹಳ ಒನಪು ಒಯ್ಯಾರಗಳಿಂದಲೂ ಕೂಡಿದ್ದು, ನೋಡಲು ಬಹಳ ಸುಂದರವಾಗಿರುತ್ತದೆ. ಉತ್ತರಪ್ರದೇಶದ ಮಯೂರನೃತ್ಯವು ಕೃಷ್ಣನ ಆರಾಧನೆಯ ಸಮಯದಲ್ಲಿ ನಡೆಯುವಂತಹುದು. ಇದನ್ನು ನರ್ತಿಸುವ ಕಲಾವಿದರು ನವಿಲಿನ ಗರಿಗಳನ್ನು ತಲೆಯ ಮೇಲೆ ಪುಟ್ಟದಾಗಿಯೂ ಹಾಗೂ ಬೆನ್ನ ಹಿಂದೆ ಅಗಲವಾಗಿಯೂ ಹೆಣೆದು ಅಲಂಕಾರವಾಗಿ ಧರಿಸುತ್ತಾರೆ. ರಾಸಲೀಲಾ ನೃತ್ಯ ಸಂದರ್ಭದಲ್ಲಿ ನರ್ತಿಸುವ ಈ ನೃತ್ಯವು, ಕೃಷ್ಣನ ಮೇಲಣ ರಾಧೆಯ ಪ್ರೇಮವನ್ನು ಕುರಿತಾಗಿದ್ದು, ಕಥಾ ಸಂದರ್ಭವು ರಾಧೆಯು ಮಯೂರನೃತ್ಯವನ್ನು ನೋಡಲು ಆಶಿಸಿದ್ದಾಗಿಯೂ ಭಗವಂತನು ತಾನೇ ನವಿಲಿನಂತೆ ರಾಧೆಯೆದುರು ನರ್ತಿಸಿದನೆಂದೂ ಇದೆ.

ಕೇರಳ ಮತ್ತು ತಮಿಳುನಾಡುಗಳಲ್ಲಿ ಮಯಿಲಾಟ್ಟಂ (=ಮಯೂರನಾಟ್ಯವು) ಕೃಷಿಗೆ ಪ್ರಮುಖವಾದ ಪೊಂಗಲ್ (ಸುಗ್ಗಿಯ) ಸಮಯದಲ್ಲಿ ನರ್ತಿಸಲ್ಪಡುತ್ತದೆ. ಮಾತ್ರವಲ್ಲದೆ ಎಲ್ಲ ಮುರುಗನ್ (ಸುಬ್ರಹ್ಮಣ್ಯ) ದೇವಸ್ಥಾನಗಳಲ್ಲಿಯೂ ದೇವರ ಹರಕೆಯ ಸೇವೆಗಾಗಿ ಮಯೂರನೃತ್ಯವು ನರ್ತಿಸಲ್ಪಡುತ್ತದೆ. ಇದು ಉತ್ತರಪ್ರದೇಶದ ಮಯೂರನೃತ್ಯವನ್ನು ಹೋಲುವಂತಹುದಾಗಿದ್ದು ಯುವತಿಯರು ನವಿಲನ್ನು ಅಡಿಯಿಂದ ಮುಡಿಯವರೆಗೂ ಹೋಲುವ ವಸ್ತ್ರಗಳನ್ನು ಧರಿಸಿ ಲಯವಾದ್ಯಗಳ ವಾದನಕ್ಕೆ ತಕ್ಕಂತೆ ಮಯೂರದ ನಡಿಗೆಯನ್ನು, ಕುಣಿತವನ್ನು ಅನುಕರಿಸುವ ಆಂಗಿಕವನ್ನು ಪ್ರಯೋಗಿಸುತ್ತಾರೆ. ಕೆಲವು ಮಯೂರನೃತ್ಯಗಳಿಗೆ ಕೃತಕ ಮಯೂರ ತಲೆಗಳನ್ನು ಧರಿಸಿಕೊಂಡು, ಮಯೂರದ ಬಾಯಿಯನ್ನು ತೆರೆಯಲು ಬೇಕೆಂದಾಗ ಈ ತಲೆಯ ಒಳಗಿನಿಂದ ಕೈಗಳ ಮೂಲಕವಾಗಿ ತೆರೆದು ಮುಚ್ಚಲು ಅನುಕೂಲಿಸುವಂತೆ ದಾರಗಳನ್ನು ಕಟ್ಟಿರುತ್ತಾರೆ. ಇನ್ನು ಕೆಲವು ಮಯೂರನೃತ್ಯಗಳಿಗೆ ಕಲಾವಿದರು ಮರದ ಕಾಲುಗಳನ್ನು ಕಟ್ಟಿ ಕುಣಿಯುತ್ತಾರೆ! ಇದಕ್ಕೆ ಅತಿಯಾದ ಶ್ರಮವುಳ್ಳ ಅಭ್ಯಾಸ, ಸಾಧನೆಗಳೂ, ಸರಿಯಾದ ಶಿಕ್ಷಣವೂ ಬೇಕಾಗುತ್ತದೆ. ಆದರೆ ಸಾಧನೆ, ಅಭ್ಯಾಸಗಳನ್ನು ಮಾಡುವುದು ಕಠಿಣತಮವಾದದ್ದರಿಂದಲೂ ಅಪಾಯಕರವಾದದ್ದರಿಂದಲೂ, ಶ್ರಮಕ್ಕೆ ತಕ್ಕಂತಹ ಆರ್ಥಿಕ ನೆರವು, ಪ್ರೋತ್ಸಾಹಗಳು ದೊರೆಯದ್ದರಿಂದಲೂ ಕಲಾವಿದರಿಗೆ ಇದನ್ನು ಉಳಿಸಿಕೊಳ್ಳುವುದು ಶ್ರಮಸಾಧ್ಯವಾಗಿ ಇಂತಹ ವಿದ್ಯೆಗಳು ಈಗ ಅಳಿವಿನ ಹಾದಿಯನ್ನು ಹಿಡಿಯುತ್ತ, ಮಾಯವಾಗುತ್ತ ಬಂದಿವೆ.

ಕೇರಳದಲ್ಲಿ ಭಗವತಿಯಾಟವು (ಭೂತಾರಾಧನೆ) ಅನೇಕ ವಿಧಿಯಾಚರಣೆಗಳೊಂದಿಗೆ ನಡೆಯುವುದು. ಬೆಳಗ್ಗಿನ ಪೂಜೆ, ಮಧ್ಯಾಹ್ನ ಪೂಜೆ, ಆಟ್ಟಂ ಉಣರ್ತಲ್, ತೋಟ್ಟಂ, ತಾಲಟ್ಟಲಿ, ಮೆರವಣಿಗೆ, ವೆಳಿಚ್ಚಪಾಡ್, ಕೋಲ, ಕ್ಷೇತ್ರಪಾಲಕನ ಕೋಲ, ಗುರುದಿ, ಕೋಳಿಬಲಿ, ವೆಳಿಚ್ಚ ಪಾಡನ ನುಡಿಗಟ್ಟು, ಮುಡಿಯಾಟಂ, ಆಟ್‌ಕೂಡಲ್ ಎಂಬ ಕ್ರಮದಲ್ಲಿ ಆಚರಣೆಗಳು ನಡೆಯುತ್ತವೆ. ಭಗವತಿ ಕೋಲದ ಮುಂಚಿತವಾಗಿ ಕೆಲವೆಡೆಗಳಲ್ಲಿ ಮನರಂಜನೆಯ ಅಂಗವಾಗಿ ಪೊರಾಟ್ ನಡೆಸುವ ಕ್ರಮವಿದೆ. ಭಗವತಿ ಕೋಲವನ್ನು ನರ್ತಿಸುವಾಗ ಧರಿಸುವ ತಲೆಮುಡಿ (ತಲೆಪಟ್ಟ) ಯ ಹಿಂಭಾಗದಲ್ಲಿ ನವಿಲುಗರಿಯನ್ನು ಅಳವಡಿಸಿ ಅಲಂಕರಿಸಿರುತ್ತಾರೆ. ಆದುದರಿಂದ ಈ ತಲೆಮುಡಿಯಾಟವು ಮಯಿಲಾಟ (ನವಿಲಾಟ)ವನ್ನು ಹೋಲುವುದು.

ಕರ್ಮನಾಚ್ ಎಂಬ ನಾಟ್ಯವು ಒರಿಸ್ಸಾದೇಶದಾಗಿದ್ದು, ಕೃಷಿಕರಾದ ಸಂಭಾಲ್ ಪುರಿಯ ಜನರು ಅವರ ಕರ್ಮದೇವತಾ ಹಾಗೂ ಕರಮ್‌ಸಾನಿ ದೇವತೆಗಳ(ಕರ್ಮಕ್ಕೆ ಸಂಬಂಧಿಸಿದ ದೇವ – ದೇವಿಯರು; ಕರ್ಮ, ಎಂದರೆ ಅದೃಷ್ಟಕ್ಕೆ ಕಾರಕರೆಂದು ನಂಬಿ) ಪ್ರೀತ್ಯರ್ಥವಾಗಿ ನರ್ತಿಸುತ್ತಾರೆ. ಅದು ಭಾದ್ರಪದದ ಶುಕ್ಲಪಕ್ಷದ ಏಕಾದಶಿಗೆ ಆರಂಭವಾಗಿ ಬಹಳ ದಿನಗಳು ಉತ್ಸವವು ನಡೆಯುತ್ತದೆ. ಈ ಉತ್ಸವವನ್ನು ಕಲಹಂಡೀ, ಸುಂದರ್ ಘರ್, ಸಂಭಾಲ್ ಪುರ್, ಮಯೂರ್‌ಭಂಜ್ ಪ್ರದೇಶಗಳಲ್ಲಿರುವ ಕೃಷಿಕರಾದ ಬಿಂಝುಲ್, ಖಾರಿಯಾ, ಕಿಸಾನ್ ಮತ್ತು ಖೋಲ್ ಮುಂತಾದ ಜನಾಂಗದವರು ಮುಖ್ಯವಾಗಿ ಆಚರಿಸುತ್ತಾರೆ.

ಕರ್ಮಾನಾಚ್ ಮುಖ್ಯವಾಗಿ ಒಳ್ಳೆಯ ಬೆಳೆ ಹಾಗೂ ಮಕ್ಕಳನ್ನು ದಯಪಾಲಿಸುವ ಕರಮ್ ಸಾನಿ ದೇವತೆಯ ಪ್ರೀತ್ಯರ್ಥವಾಗಿದ್ದು ಪೂಜಾವಿಧಿಗಳು ನಡೆದ ನಂತರ ದೊಡ್ಡತಾಳ (ಝುಲ್ಲರೀ), ಮಾಂಡಲ್ (ದೊಡ್ಡ ಡೋಲಿನಂತಹ ವಾದ್ಯ) ಮುಂತಾದ ವಾದ್ಯವಾದನಗಳೊಂದಿಗೆ ಗೀತಗಳನ್ನು ಹಾಡುತ್ತ ನರ್ತಿಸುತ್ತಾರೆ. ಕೆಂಪು ಬಣ್ಣದ ಅಂಗಿಗಳ ಮೇಲೆ ವರ್ಣರಂಜಿತವಾದ ನವಿಲಿನ ರೆಕ್ಕೆ – ಪುಕ್ಕಗಳನ್ನು ಬಹಳವಾಗಿ ಅಲಂಕರಿಸಿ, ಸಣ್ಣ ಸಣ್ಣ ಕವಡೆ, ಶಂಖ, ಕಪ್ಪೆಚಿಪ್ಪು ಮುಂತಾದವುಗಳಿಂದ ಮಾಡಲ್ಪಟ್ಟ ಆಭರಣಗಳನ್ನು ಧರಿಸಿ ಸ್ತ್ರೀ – ಪುರುಷ – ಮಕ್ಕಳಾದಿಯಾಗಿ ರಾತ್ರಿಯಿಡೀ ಡೋಲಿನ ಮೈಮರೆಸುವಂತಹ ಶಬ್ದಕ್ಕೆ ಸರಿಯಾಗಿ, ಶಕ್ತಿಯುತವಾಗಿ, ಕುಣಿಯುತ್ತಾರೆ. ಹಾಡುಗಳು ಕರಮ್‌ಸಾನಿಯನ್ನು ಕುರಿತಾದ ಭಕ್ತಿಗೀತೆಗಳೂ, ಪ್ರಕೃತಿಯ ವರ್ಣನೆ – ಹೊಗಳಿಕೆ, ಸ್ನೇಹ – ಪ್ರೀತಿ – ಹಾಸ್ಯ ಮುಂತಾದ ಭಾವಗಳಿರುವ ಸಾಹಿತ್ಯಗಳಿಂದ ಕೂಡಿರುತ್ತವೆ. ಒರಿಸ್ಸಾದ ಮಯೂರಭಂಜ್ ಪ್ರಾಂತ್ಯದ ಚ್ಛಾವ್ ನೃತ್ಯದ ಅಂಗವಾದ ಮಯೂರ ಜನಪದ ನೃತ್ಯವು, ಬಿಸಿಲಿನ ಬೇಗೆಯಲ್ಲಿ ಬೆಂದು ಬಸವಳಿದು ಕಾದಿದ್ದ ಮಯೂರವು ವರ್ಷಾಗಮನಕ್ಕೆ ಸಂತಸಪಟ್ಟು ಜೀವೋಲ್ಲಾಸಕಾರಕವಾದ ಶುಭ್ರ ವಾಯುಸಂಚಾರ ಮತ್ತು ಜಲದ ನವಾಗಮನದ ಕುರುಹಾಗಿ ಕುಣಿಯುವಂತಿರುತ್ತದೆ. ಚ್ಛಾವ್ ನೃತ್ಯದ ಪ್ರಮುಖ ಅಂಗವೇ ಆದ ಮುಖವಾಡಗಳನ್ನು ಈ ಮಯೂರನೃತ್ಯಕ್ಕೆ ಉಪಯೋಗಿಸುವುದಿಲ್ಲ.

ಛತ್ತೀಸಗಢದ ಮಯೂರನೃತ್ಯವು ಆದಿವಾಸಿಗಳು ನರ್ತಿಸುವಂತಹುದಾಗಿದ್ದು, ಪುರುಷರು ನವಿಲ್ಗರಿಗಳನ್ನು (plumes) ಅಲಂಕರಿಸಿದ ತಲೆಯ ಪಾಗನ್ನೂ, ವರ್ಣರಂಜಿತವಾದ ವಸ್ತ್ರಗಳನ್ನೂ ಧರಿಸುತ್ತಾರೆ. ಸ್ತ್ರೀಯರು ಹಚ್ಚೆಗಳನ್ನು ಹಾಕಿಸಿಕೊಂಡಿದ್ದು, ಹಿತ್ತಾಳೆಯ ಸುಂದರವಾದ ತಲೆಗಟ್ಟುಗಳನ್ನೂ , ಮಣಿಗಳಿಂದ ಪೋಣಿಸಲ್ಪಟ್ಟ ಕಂಠಾಭರಣಗಳನ್ನೂ ಧರಿಸುತ್ತಾರೆ.

ಉತ್ತರಾಖಂಡದ ಪಶ್ಚಿಮದಲ್ಲಿರುವ ಗಢ್ವಾಲ್ ಹಿಮಾಲಯದ ತಪ್ಪಲಿನಲ್ಲಿದೆ. ಗಢ್ವಾಲ್‌ದ (=ಗರ್ಹ್ವಾಲ್) ಜನಪದರಲ್ಲಿ ನವಿಲಿಗೆ ಸಂಬಂಧಿಸಿದಂತೆ ಗೀತ–ನೃತ್ಯಗಳಿರುವುದು ಸರ್ವೇಸಾಧಾರಣವಾಗಿದ್ದು, ಎಲ್ಲ ರೀತಿಯ ಜನಸಮುದಾಯಗಳಲ್ಲಿಯೂ ಮಯೂರನೃತ್ಯವು (= ಮೋರ್ ನಾಚೊರ್) ವಸಂತಮಾಸದಲ್ಲಿ ನರ್ತಿಸಲ್ಪಡುತ್ತದೆ. ಇದಕ್ಕೂ ಅಲ್ಲಿನ ಚಾವುನ್‌ಫುಲ ನೃತ್ಯಕ್ಕೂ ಬಹಳಷ್ಟು ಹೋಲಿಕೆಗಳಿದ್ದರೂ ಮಯೂರ ನರ್ತನವು ಹೆಚ್ಚು ಮುಕ್ತವಾದ ಅನಿರ್ಬಂಧಿತ ನೃತ್ಯಶೈಲಿಯಾದದ್ದರಿಂದ ಜನರಿಗೆ ಹೆಚ್ಚು ಪ್ರಿಯವಾಗಿದೆ. ಸಂಶೋಧಕರಾದ ಡಾ. ನೌಟಿಯಾಲರು ಗಢ್ವಾಲ್‌ನ ಈ ಮಯೂರನೃತ್ಯವು ಮಧ್ಯಕಾಲೀನವೂ, ಹೆಚ್ಚು ಜನಪ್ರಿಯವಾಗಿಯೂ ಆಗಿ ಪ್ರಚಲಿತವಿತ್ತೆನ್ನುತ್ತಾರೆ.

ಲಢಾಕ್‌ನ 'ಚಾಛೆಸ್' (Chaches) ಅಥವಾ ಮಯೂರನೃತ್ಯವು ಸ್ತ್ರೀಯರು ನರ್ತಿಸುವಂತಹುದಾಗಿದ್ದು, ಸುಂದರಿಯಂತಹ (ಷಹನಾಯ್ ವಾದ್ಯದ ಸಣ್ಣ ರೂಪ) ಗಾಳಿವಾದ್ಯ, ತಮಟೆಗಳ ವಾದನಗಳು ಮತ್ತು ಪುರುಷರ ಗಾಯನಗಳೊಂದಿಗೆ ನರ್ತಿಸುತ್ತಾರೆ. ಇದರ ಆಹಾರ್ಯ ಹಾಗೂ ನರ್ತನಗಳಲ್ಲಿ ಮಯೂರಾಭಿನಯವು ವಿಶೇಷವಾಗಿ ತೋರುವುದಿಲ್ಲ.

ಭಾರತದ ಹೆಚ್ಚಿನ ಪ್ರದೇಶಗಳಲ್ಲಿ ಮಯೂರನೃತ್ಯಪ್ರಕಾರವಿರುವುದು ಮಾತ್ರವಲ್ಲದೆ ಸಿಂಹ, ಕುದುರೆ, ಪಾರಿವಾಳ ಮುಂತಾದ ನೃತ್ಯಪ್ರಕಾರಗಳೂ ಜನಪದರಲ್ಲಿವೆ. ಇದರಲ್ಲಿ "ಸುವ ನೃತ್ಯ"ವು ಛತ್ತೀಸಗಢದ ಆದಿವಾಸಿಗಳು ನರ್ತಿಸುವಂತಹುದಾಗಿದ್ದು ಇದು 'ಪಾರಿವಾಳ ನೃತ್ಯ'ವೆಂದೂ ಹೆಸರಾಗಿದೆ. ಇದರಲ್ಲಿ ಪುರುಷರು ತಮ್ಮ ಆಯ್ಕೆಯ ವಾದ್ಯಗಳನ್ನು ನುಡಿಸಿದರೆ, ಸ್ತ್ರೀಯರೂ, ಹೆಣ್ಣುಮಕ್ಕಳೂ ಪಾರಿವಾಳಗಳಂತೆ ನಟಿಸಿ ನರ್ತಿಸುತ್ತಾರೆ!

ವಿಶ್ವದ ಇತರ ದೇಶಗಳ ಜನಾಂಗಗಳಲ್ಲಿ ಮಯೂರ ಗೀತ – ನೃತ್ತಗಳು

ಗ್ರೀಕ್ ತತ್ವಜ್ಞಾನಿಯಾದ ಅರಿಸ್ಟಾಟಲನು (ಕ್ರಿ. ಪೂ. 384 – 322) ಮಯೂರದ ಸ್ವರೂಪ, ಆಹಾರ ಇತ್ಯಾದಿಗಳನ್ನು ಕುರಿತು ಹೇಳಿದ್ದಾನೆ. ಅಲೆಕ್ಸಾಂಡರನು ಭಾರತದಿಂದ 200 ನವಿಲಿನ ಮರಿಗಳನ್ನು ಗ್ರೀಕಿಗೆ ತೆಗೆದುಕೊಂಡು ಹೋದನೆಂದೂ ಅಲ್ಲಿಂದ ಕ್ರಿಸ್ತಪೂರ್ವದಲ್ಲಿಯೇ ಯೂರೋಪ್ ಖಂಡದಲ್ಲಿ ನವಿಲು ಪಕ್ಷಿಯ ಸಂತಾನವು ಹಬ್ಬಲು ಕಾರಣವಾಯಿತೆಂದೂ ಸಂಶೋಧಕರು ಹೇಳುತ್ತಾರೆ.

ವಿಶ್ವದಲ್ಲಿ ಏಷ್ಯಾಖಂಡದಲ್ಲಿಯೆ ಮಯೂರನೃತ್ಯವು ಹೆಚ್ಚು ನರ್ತಿಸಲ್ಪಡುತ್ತಿದ್ದು, ಆಫ್ರಿಕಾ ಖಂಡದ ಕಾಂಗೋದಲ್ಲಿಯೂ ಈ ನೃತ್ಯಪ್ರಕಾರವು ಇದೆ. ಆಫ್ರಿಕಾದೇಶದ ಜನಪದದಲ್ಲಿಯೂ ಅನೇಕ ಜನಪದಗೀತೆಗಳು ಮಯೂರವನ್ನು ಕುರಿತಾಗಿದ್ದು ನರ್ತಿಸಲ್ಪಡುತ್ತವೆ. ಇವುಗಳ ಸಂಗ್ರಹವನ್ನು ನವೊಮಿ ವಾನ್ ತೊಲ್ (Naomi Van Tol)ರವರು ಸಂಗ್ರಹಿಸಿದ್ದಾರೆ. ಮಯೂರನರ್ತನಪದ್ಧತಿಯು ವಿಶೇಷವಾಗಿ ಭಾರತ, ಶ್ರೀಲಂಕಾ, ಬಾಂಗ್ಲಾದೇಶ, ಇಂಡೋನೇಷ್ಯಾ, ಮೈಯ್ಯನ್ಮಾರ್, ಪಶ್ಚಿಮ ಜಾವಾ, ಕಾಂಬೋಡಿಯಾ ದೇಶದ ಪಶ್ಚಿಮ ಹಾಗೂ ಉತ್ತರಭಾಗಗಳಲ್ಲಿದ್ದು ಜನಪ್ರಿಯ ನರ್ತನವಿಧವಾಗಿದೆ. ಬಹುಶಃ ಈ ದೇಶಗಳಲ್ಲಿಯೇ ಮಯೂರ ಪಕ್ಷಿ ಸಂಕುಲವು ಇರುವುದೂ, ಕೃಷಿಸಹಕಾರಿಯೆಂದೂ, ಅತಿಸುಂದರವೆಂದೂ, ಔಷಧೀಯ ಗುಣಗಳುಳ್ಳದ್ದು ಎಂಬ ನಂಬುಗೆಗಳ ಕಾರಣಗಳಿಂದಾಗಿಯೂ ಅವಕ್ಕೆ ಪೂಜನೀಯ, ಶುಭಸಂಕೇತಕಾರಕವೆಂಬ ಉನ್ನತ ಸ್ಥಾನಗಳೂ ದೊರಕಿವೆ.

ಮಾತ್ರವಲ್ಲದೆ, ಪಕ್ಷಿಯ ಸೌಂದರ್ಯವೂ ಶಿಷ್ಟ ಹಾಗೂ ಜನಪದ ಲಲಿತಕಲೆಗಳಲ್ಲಿ ಪ್ರಯುಕ್ತಿಯಾಗಲು ಕಾರಣವಾಯಿತೆಂದು ತೋರುತ್ತದೆ.

ಯಹೂದ್ಯರಲ್ಲಿಯೂ 'ಚಿನ್ನದ ನವಿಲು' (Di Goldene Pave) ಎಂಬ ಪ್ರಸಿದ್ಧ ಜನಪದ ಗೀತವಿದೆ ಹಾಗೂ ನವಿಲನ್ನು ಕುರಿತಾದ ಇನ್ನೂ ಅನೇಕ ಜನಪದ ಗೀತೆಗಳೂ ಕಥಾನಕಗಳು ಇವೆ. ಕ್ರಿ. ಶ. 1938 ರಲ್ಲಿ ಬೊರೆಗೊವ್ಸ್ಕೀಯವರು ಯಹೂದ್ಯರ ಜನಪದ ಗೀತೆಗಳ (Jewish Folk Songs) ಸಂಗ್ರಹವನ್ನು ಮಾಡಿ ಮುದ್ರಿಸಿದ್ದಾರೆ. ಅದರಲ್ಲಿ ಒಂದು ಕಥೆಯು ಕನ್ಯೆಯೊಬ್ಬಳು ತಾನೇ ಮಯೂರಿಯಾಗಿ ವೇಷಬದಲಿಸಿ ತನ್ನ ಮಾತಾಪಿತೃಗಳ ಗೃಹದತ್ತ ಸಾಗುತ್ತಾಳೆ. ರಷ್ಯಾದೇಶದಲ್ಲಿ ಕ್ರಿ. ಶ. 1901ರಲ್ಲಿ ಗಿನ್ಸ್ಸ್ ಬೆರ್ಗಂಡ್ ಮರೆಕ್ ರವರು (Ginzbergand Marek) ಸಂಗ್ರಹಿಸಿದ ಯಹೂದ್ಯರ ಜನಪದಗೀತ ಸಂಗ್ರಹದ ಗೀತವೊಂದರಲ್ಲಿ ಮಯೂರವು ಕನ್ಯೆಯೊಬ್ಬಳ ಸ್ಥಿತಿಗತಿಗಳ ಬಗ್ಗೆ ಆಕೆಯ ಮಾತಾಪಿತೃಗಳಿಗೆ ಸುದ್ದಿಯನ್ನು ರವಾನಿಸುವ ದೂತಿಯಾಗಿದೆ. ಹಂಗರಿ ದೇಶದ ಮಯೂರನೃತ್ಯದ ಗೀತೆಗಳು ಹೆಚ್ಚು ಜನಪ್ರಿಯತೆಯನ್ನು ಗಳಿಸಿವೆ (ಹಾಡೊಂದು 'Felszallot a Pava'ಎಂದು ಆರಂಭಿಸುತ್ತದೆ.). ಮಧ್ಯಯುಗದಲ್ಲಿಯೇ ಯೂರೋಪಿನ ಅನೇಕ ಜನಾಂಗಗಳಲ್ಲಿ (History of Dance by Gayle Kassing, chapter V..) ಮಯೂರನೃತ್ಯವು ಪ್ರಚಲಿತವಿದ್ದಿದ್ದು ಬಹು ಜನಪ್ರಿಯತೆಯನ್ನು ಗಳಿಸಿತ್ತು.

ಏಷ್ಯಾ ಹಾಗೂ ಯೂರೋಪ್ ಖಂಡಗಳಲ್ಲಿ ಮಯೂರನೃತ್ಯ ಮಾತ್ರವಲ್ಲದೆ, ಸ್ನೀನ್ಗ್ ಟೊಸೊಂಗ್ (Sneang Tosoang Dance) ಎಂಬ ಹೆಸರಿನ ಸರ್ಪ, ವ್ಯಾಘ್ರ, ಹರಿಣಗಳನ್ನೊಳಗೊಂಡ ನೃತ್ಯಗಳೂ ಇದ್ದು, ಕಾಂಬೋಡಿಯಾ ದೇಶದ ಫುಮ್ ಕ್ರವನ್ಹ್ (Phnum Kravanh) ಪ್ರದೇಶದ ಪುರ್ಸತ್ (Pursat) ಪ್ರ್ಯಾಂತದ ಪಿಯರ್ (Pear) ಜನಾಂಗವೇ ಈ ನೃತ್ಯಗೀತಗಳಿಗೆ ಮೂಲವಾಗಿದ್ದು ಹೆಚ್ಚು ಪ್ರಚಲಿತದಲ್ಲಿವೆ. ಕಾಂಬೋಡಿಯಾ ದೇಶದಲ್ಲಿ ನೃತ್ಯವು ಮೂರು ಮುಖ್ಯ ವಿಭಾಗಗಳಾಗಿ ಪರಿಗಣಿಸಲ್ಪಟ್ಟಿದೆ. ಇವು –

1.ರಾಜರ ಆಸ್ಥಾನಗಳಲ್ಲಿ ಶಾಸ್ತ್ರೀಯವಾಗಿ ನರ್ತಿಸಲ್ಪಟ್ಟು ರಾಜರನ್ನು ಆಸ್ಥಾನಕ್ಕೆ ಆಹ್ವಾನಿಸುವ ಸಮಯದಲ್ಲಿಯೂ, ಮನರಂಜನೆಗಾಗಿಯೂ, ದೇವತಾ ಉತ್ಸಾವಾದಿ ಸಮಯಗಳಲ್ಲಿಯೂ, ಗೌರವಾರ್ಪಣೆಗಾಗಿಯೂ ನಡೆಯುತ್ತಿದವು. ಇದರಲ್ಲಿ ಅಪ್ಸರಾ ನೃತ್ಯವು (Robam Tep Apsara = Lakhon Kbach Boran Khmer) ಬಹಳ ಮುಖ್ಯವಾದದ್ದು. ಇದರ ಆಹಾರ್ಯವೂ ಆಂಗಿಕವೂ ಬಹಳ ಸುಂದರವಾಗಿದೆ. ಈ ಶಾಸ್ತ್ರೀಯ ನೃತ್ಯಕ್ಕೆ ಬಹಳಷ್ಟು ಇತಿಹಾಸವಿದೆ. ಅಪ್ಸರಾನೃತ್ಯವೆಂದು ಹೆಸರಿದ್ದರೂ, ಈ ನೃತ್ಯರೂಪಕದಲ್ಲಿ ದೇವತೆಯರೂ, ರಾಕ್ಷಸರೂ ಇರುತ್ತಾರೆ! (ಈ ರೀತಿಯಾಗಿ ಕಲ್ಪನೆಗಳಿರುವ ಕಾಂಬೋಡಿಯಾ ದೇಶವಾದರೂ ಬೃಹದ್ಭಾರತಕ್ಕೆ ಸೇರಿದ್ದ ಪಲ್ಲವ ಸಾಮ್ರಾಜ್ಯದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದ ಕಾಂಭೋಜ ದೇಶವಲ್ಲವೇ? ಕಾಂಭೋಜದೇಶವು ನಮ್ಮ ಹಿರಿಯರಿಗೆ ಬಹು ಹಿಂದಿನಿಂದಲೂ ಉದಾ– ಮಹಾಭಾರತ ಕಾಲದಲ್ಲಿಯೇ ಪರಿಚಿತವಾಗಿತ್ತು. ಅಲ್ಲಿಂದ ಕುದುರೆಗಳು ಆಮದಾಗುತ್ತಿದ್ದವು! ಪ್ರಾಚೀನ ಬೃಹದ್ಭಾರತದ ಅಂಗವಾಗಿದ್ದ ಕಂಬುಜದೇಶದಿಂದ (ಕ್ಯಾಂಬೋಡಿಯಾ) ಬಂದಿದ್ದ ರಾಗದ ಹೆಸರು ಕಾಂಭೋಜಿ. ಕಾಂಬೋಧಿ, ಕಾಂಬೋಜ ಎಂದು ಮುಂತಾದ ದೇಶಸೂಚಕ ಅನ್ವರ್ಥನಾಮವಾಗಿಯೇ ಇವು ಇವೆ. ಈ ರಾಗವನ್ನು ಮತಂಗ, ಕಶ್ಯಪ, ಯಾಷ್ಟಿಕಾದಿಗಳು ಕಾಂಬೋಜಿ ಎಂಬ ನಾಮರೂಪದಲ್ಲಿ ಗ್ರಹಿಸಿದ್ದಾರೆ. ಖ್ಮೇರ್ ಭಾಷೆಯಲ್ಲಿ 'ಕಾಂಪೂಚಿಯಾ' ಎಂದು ಕರೆಯಲ್ಪಡುವ ಈ ಶಬ್ದವು ಸಂಸ್ಕೃತದ 'ಕಂಬುಜದೇಶ' ದಿಂದ ವ್ಯುತ್ಪನ್ನವಾಗಿದ್ದು, ಆ ದೇಶವಾಚಕವಾದ ಈ ಕಾಂಭೋಜಿ, ಹರಿಕಾಂಭೋಜಿ ರಾಗಗಳು ಇಂದೂ ಭಾರತೀಯ ಸಂಗೀತ ಪ್ರಭೇದಗಳಾದ ಜನಪದ ಹಾಗೂ ಶಾಸ್ತ್ರೀಯ ಸಂಗೀತಗಳಲ್ಲಿ ಬಹುವಾಗಿ ಪ್ರಯೋಗದಲ್ಲಿರುವ ರಾಗಗಳಾಗಿವೆ.)

2.ಜನಪದ ನೃತ್ಯಗಳು, ಜನಪದರ ಸಾಂಸ್ಕೃತಿಕ ಪರಂಪರೆಯನ್ನು ಹೇಳುವಂತಹವು. ಇದರಲ್ಲಿ ರೊಬಮ್ ನ್ಗೋಕ್ ಪೇಯ್ಲಿನ್ (Robam Kngaok Pailin) ಮಯೂರನೃತ್ಯವು 'ಕುಲ' (Kula) ಜನಾಂಗದ ಸಂಸ್ಕೃತಿಯನ್ನು ಬಿಂಬಿಸುವ, ಪೇಯ್ಲಿನ್‌ನ ಜನರು ನರ್ತಿಸುವಂತಹುದು. ಭಾರತದಲ್ಲಿರುವ ಉದ್ದೇಶಗಳಲ್ಲಿಯೇ ಪ್ರಯೋಗಿಸಲ್ಪಡುವ ಈ ಮಯೂರನೃತ್ಯವು ಪಲ್ಲವರ ಕಾಲದಲ್ಲಿ ಕಾಂಭೋಜ ದೇಶಕ್ಕೆ ಹರಡಿರಬಹುದಾದ ಸಾಧ್ಯತೆಯೇ ಹೆಚ್ಚಿದೆ.

3.ಸಾಮಾಜಿಕರು ಹಬ್ಬ, ಉತ್ಸವಾದಿಗಳ ಸಮಯದಲ್ಲಿ, ಸಮಾರಂಭಗಳಲ್ಲಿ ನರ್ತಿಸುವಂತಹವು.

ಚೀನಾದೇಶದ ಡಾಯ್ (Dai) ಬುಡಕಟ್ಟಿನ ಜನಾಂಗದಲ್ಲಿ ಮಯೂರನೃತ್ಯವು ಪ್ರಮುಖ ನೃತ್ಯವಾಗಿದೆ. ಇಲ್ಲಿ, ಈ ನೃತ್ಯವನ್ನು ಹಿಮಾಲಯ ಹಾಗೂ ಭಾರತದ ಇನ್ನಿತರ ಅನೇಕ ಪ್ರದೇಶಗಳಲ್ಲಿ ಇರುವಂತೆಯೇ ಸೌಂದರ್ಯ, ಸದ್ಗುಣ, ವಿವೇಕ, ಆಕರ್ಷಕ, ಹಾಗೂ ಜ್ಞಾನಗಳ ಶುಭಸೂಚಕ ಸಂಕೇತಗಳಾಗಿ ಪರಿಗಣಿಸಿದೆ. ಚೀನಾದೇಶದಲ್ಲಿ ಅಲ್ಪಸಂಖ್ಯಾತರಾಗಿರುವ 'ಡಾಯ್' ಮತ್ತು ಜಿಂಗ್ ಪೊ ಜನಾಂಗಗಳಲ್ಲಿ ಮಯೂರನೃತ್ಯವು ಇನ್ನೂ ಜೀವಂತವಾಗಿದ್ದು, ನವಿಲು ಪವಿತ್ರವಾದ, ಆನಂದ ಹಾಗೂ ಶುಭದ್ಯೋತಕವಾದ ಪಕ್ಷಿಯಾಗಿದೆ. ಇದರಿಂದಾಗಿ ನವಿಲಿಗೆ ಸಂಬಂಧಿಸಿದಂತೆ ಅನೇಕ ಆಧ್ಯಾತ್ಮಿಕ ಹಾಗೂ ಐತಿಹಾಸಿಕ ಸನ್ನಿವೇಶಗಳ

ಕಥೆಗಳು ಹೆಣೆಯಲ್ಪಟ್ಟಿವೆ. ಯುನ್ನನ್ ಪ್ರಾಂತ್ಯದ 'ಡಾಯ್' ಜನಾಂಗದವರಿಗೆ ಸಾವಿರಾರು ವರ್ಷಗಳ ಇತಿಹಾಸವಿದ್ದು ಅವರಿಗೆ ಪ್ರಿಯವಾದ ಮಯೂರನೃತ್ಯವು ಅವರ ಪ್ರತಿಯೊಂದು ಸಂಪ್ರದಾಯಪೂರ್ವಕ ಕಟ್ಟುಕಟ್ಟಲೆಯ ಆಚರಣಾ ವಿಧಿಗಳಿಗೂ ನರ್ತಿಸಲ್ಪಡುತ್ತದೆ. ಈ ನರ್ತನವು ಪರಂಪರಾಗತವಾಗಿ ಉಳಿದು ಬೆಳೆಯುತ್ತಿವೆ. ಸಾವಿರ ವರ್ಷಗಳ ಹಿಂದೆ ಡಾಯ್ ಜನಾಂಗದ ಹಿರಿಯನೊಬ್ಬನು ಮಯೂರವೊಂದು ಅತ್ಯಂತ ಸುಂದರವಾಗಿ ನರ್ತಿಸುವುದನ್ನು ನೋಡಿ ಅದನ್ನೇ ಅನುಕರಿಸಿ ತಾನೂ ನರ್ತಿಸಿದನೆಂದೂ, ಅದೇ ಪರಂಪರೆಯನ್ನು ಜನಾಂಗವು ಮುಂದುವರೆಸಿತೆಂದೂ ಹೇಳಲಾಗುತ್ತದೆ. ಡೊಂಘನ್ (Donghan) ರಾಜಪರಂಪರೆಯ ಆಳ್ವಿಕೆಯ ಸಮಯದಲ್ಲಿ ಪ್ರಾಚೀನ ಚೀನಾದೇಶದ ರಾಜಧಾನಿಯಾಗಿದ್ದ ಲ್ಯೂಯಾಂಗ್ (Luoyang) ಗೆ ಹೋಗಿ ಈ ಮಯೂರನೃತ್ಯವನ್ನು ಚಕ್ರವರ್ತಿಗೆ ಸಮರ್ಪಿಸುತ್ತಿದ್ದರೆಂದೂ ಐತಿಹ್ಯವಿದೆ. ಅದು ಸತ್ಯವೇ ಆಗಿದ್ದಲ್ಲಿ ಡಾಯ್ ಜನಾಂಗದ ಮಯೂರನೃತ್ಯಕ್ಕೆ ಎರಡುಸಾವಿರ ವರ್ಷಗಳಿಗಿಂತಲೂ ಹೆಚ್ಚಿನ ಪ್ರಾಚೀನತೆಯು ಇದೆಯೆನ್ನಬಹುದು! ಈ ನೃತ್ಯವನ್ನು ನರ್ತಿಸಲೂ ಕೆಲವು ಕಟ್ಟುಕಟ್ಟಲೆಯ ವಿಧಿವಿಧಾನಗಳು, ನಿಯಮಗಳು ಇವೆ. ಡಾಯ್ ಜನಾಂಗಕ್ಕೆ ನವಿಲಿನ ಜೀವನಶೈಲಿಯ ಜ್ಞಾನವೂ ಅನುಭವಗಳೂ ಹೆಚ್ಚಿದ್ದು ಸಂಪೂರ್ಣವಾಗಿ ನವಿಲಿನ ಹಾವಭಾವಗಳನ್ನು ಸೊಗಸಾಗಿ ಅನುಕರಿಸುತ್ತಾರೆ. ಆರಂಭದಲ್ಲಿ ನರ್ತನವು ನವಿಲು ತನ್ನ ಆವಾಸಸ್ಥಾನದಿಂದ ಹಾರುತ್ತ ಹೊರಟು, ತನ್ನ ಕೊರಳನ್ನು ಕೊಂಕಿಸುತ್ತ, ಸುತ್ತಮುತ್ತ ನೋಡುತ್ತ, ಗಮನಿಸುತ್ತ, ಸುಂದರವಾಗಿ ನರ್ತಿಸಲು ತೊಡಗುತ್ತದೆ. ಹುಲ್ಲಹಾಸಿಗೆಯ ಮೇಲೆ ನರ್ತಿಸುತ್ತ, ಜಲಪಾನಮಾಡುವಂತೆ, ಆಹಾರಕ್ಕಾಗಿ ಹುಡುಕುವಂತೆ, ನಂತರ ಕಾರಂಜಿಯ ಅಥವಾ ನದಿಯ ದಡದಲ್ಲಿ ನೀರಿನಲ್ಲಿ ತೋಯುತ್ತ, ಮೀಯುತ್ತ ತನ್ನ ಸುಕೋಮಲ ಸುಂದರ ವರ್ಣರಂಜಿತ ಗರಿಗಳನ್ನು ಕೆದರಿ ನೀರನ್ನು ಕೊಡವುವಂತೆ ನರ್ತನವು ಇದ್ದು, ಕಡೆಯಲ್ಲಿ ಗರಿಗೆದರಿ ಸಂತೋಷವಾಗಿ ಹಾರುವಂತೆ ಇರುತ್ತದೆ. ನರ್ತಕಿಯು ಮೃದುಮಧುರವಾಗಿ ತೊನೆದಾಡುವಂತೆ, ತರಂಗಿತವಾಗಿರುವಂತೆ ಮೊಣಕಾಲುಗಳನ್ನು ಬಾಗಿ ಬಳಕಿಸುತ್ತಲೂ, ಅನೇಕ ಶ್ರೇಣಿಗಳಲ್ಲಿ, ವರಸೆಗಳಲ್ಲಿ ಹಸ್ತಾಭಿನಯಗಳಲ್ಲಿ ಮಯೂರವನ್ನು ಅಭಿನಯಿಸುತ್ತಾಳೆ. ವೃಕ್ಷದೇವತೆಯಂತೆ, ಯಕ್ಷಿಣಿ, ಕಿನ್ನರಿಗಳಂತೆ ಸುಸಂಸ್ಕೃತ, ಲಾವಣ್ಯಯುತ, ನವುರಾದ, ಸೂಕ್ಷ್ಮತರವಾದ, ಜಟಿಲವಾದ, ಕುಶಾಗ್ರಮತಿಯಿಂದ, ಆದರೆ ಬಲು ಸೊಬಗಿನಿಂದ ಕೂಡಿ, ನಯವಾದ ಮೈಯ ಬಾಗು – ಬಳುಕು, ತಿರುವು – ಕೊಂಕುಗಳಿಂದ, ಇಡೀ ದೇಹವನ್ನೇ ಕಂಪಿಸುತ್ತ ನಯನ ಮನೋಹರವಾಗಿ ನರ್ತಿಸುತ್ತಾಳೆ. ಡಾಯ್ ಜನಾಂಗದ ಪುರುಷರೂ ಸ್ತ್ರೀಯರೂ ನರ್ತಿಸುವ ಈ ಆನಂದಘನೀಭೂತವಾದ ಮಯೂರನರ್ತನದ ರೀತಿಯು, ಜ್ಞಾನಪೂರ್ಣವಾಗಿ, ಲಾವಣ್ಯಯುಕ್ತವಾಗಿ, ರಸಭರಿತ ವಾಗಿದ್ದು, ಮಾರ್ಮಿಕವಾದ, ಸೂಕ್ಷ್ಮತರವಾದ ಭಾವಪೂರ್ಣ ಅಭಿನಯಗಳಿಂದ ಕೂಡಿದ್ದರಿಂದಾಗಿ ಚೀನಾದೇಶದಲ್ಲಿಯೇ ಅನೇಕ ಜನಾಂಗೀಯ ನೃತ್ಯಗಳಲ್ಲಿಯೇ ಈ ನೃತ್ಯವು ಉನ್ನತಸ್ಥಾನವನ್ನು ಗಳಿಸಿ, ಈ ನೃತ್ಯದಿಂದಾಗಿಯೇ ಡಾಯ್ ಜನಾಂಗದ ಪರಂಪರೆಯು ಅವರ ದೇಶದಲ್ಲಿಯೇ ಅತ್ಯುತ್ತಮವೆಂದು ಚೀನಾದೇಶದಲ್ಲಿ ಪರಿಗಣಿಸಲ್ಪಟ್ಟಿದೆ. ಮಯೂರವನ್ನು ಅತ್ಯಂತವಾಗಿ ಪೂಜ್ಯ ಭಾವದಿಂದ ನೋಡುವ ಡಾಯ್ ಜನಾಂಗವು ಅವರ ಸುಖಜೀವನದ ಕೋರಿಕೆ, ಹಾರೈಕೆಗಳನ್ನು ಮಯೂರನೃತ್ಯದ ಮೂಲಕ ಪ್ರಾರ್ಥಿಸುತ್ತ ತಮ್ಮ ಭಕ್ತಿಯನ್ನು ಪ್ರಕೃತಿಗೆ ಸಮರ್ಪಿಸುತ್ತಾರೆ.

ಟಿಬೆಟ್ ಸಂಸ್ಕೃತಿಯಲ್ಲಿ ಮಯೂರನೃತ್ಯವು 'ಯಾಕ್' ನೃತ್ಯದಷ್ಟೇ ಪ್ರಸಿದ್ಧವಾಗಿದೆ. ಇಂಡೋನೇಷ್ಯಾದ ಪಶ್ಚಿಮ ಜಾವಾ ಹಾಗೂ ರಿಯಾಗ್ ಪ್ರದೇಶಗಳಲ್ಲಿ ಸುಂಡನೀಸ್ ಜನಾಂಗದಿಂದ 'ತಾರೀ ಮೆರೆಕ್' ಅಥವಾ 'ಮೆರೆಕ್' (=ಮಯೂರ) ನೃತ್ಯವು ನರ್ತಿಸಲ್ಪಡುತ್ತದೆ. ಶ್ರೀಲಂಕಾದಲ್ಲಿ ಪೆರಹರ ಉತ್ಸವಾದಿಗಳ ಕಾಲದಲ್ಲಿ ಮಯೂರನೃತ್ಯವು ನರ್ತಿಸಲ್ಪಡುತ್ತದೆ.

ಭಾರತೀಯ ಗೀತವಾದನನರ್ತನ ಶಾಸ್ತ್ರಗಳಲ್ಲಿ ಮಯೂರ

ವಾದ್ಯಗಳಲ್ಲಿ : ಗ್ರೀಕ್ ಮತ್ತು ಅರೇಬಿಕ್ ಭಾಷೆಗಳಲ್ಲಿ ನವಿಲಿಗೆ 'ಟಾವ್ಸ್' ಎನ್ನುತ್ತಾರೆಂದು ಈಗಾಗಲೇ ಹೇಳಿದೆ. ಅವರಲ್ಲಿ ನವಿಲಿನಂತೆ ರೂಪ ಹಾಗೂ ವರ್ಣರಂಜಿತವಾದ ತಂತೀವಾದ್ಯವಿದೆ. ಅದನ್ನವರು 'ಟಾವ್ಸ್' ಎಂದೇ ಕರೆಯುತ್ತಾರೆ. ಭಾರತದಲ್ಲಿ ಮಯೂರ ರೂಪದಂತೆಯೇ ತಯಾರಿಸಲ್ಪಡುವ ಮಯೂರವೀಣೆಯು ಪ್ರಾಚೀನ ಪ್ರಸಿದ್ಧವಾಗಿದೆ. ಪ್ರಾಚೀನದ ಕೆಲವು ವಂಶೀಗಳ ಊದುವ ಅಗ್ರಭಾಗವನ್ನು ಮಯೂರದ ಶಿರದಂತೆಯೇ ರಚಿಸಿರುತ್ತಿದ್ದರು.

ತಾನಗಳಲ್ಲಿ : ಕರ್ನಾಟಕಶಾಸ್ತ್ರೀಯಸಂಗೀತಪದ್ಧತಿಯಲ್ಲಿ ತಾನವು ಪ್ರೌಢಭಾಗ. ತಾನವೆಂದರೆ ಸ್ವರವನ್ನು ವಿಸ್ತರಿಸುವುದು ಎಂದು ಪ್ರಾಚೀನ ಸಂಗೀತಶಾಸ್ತ್ರದ ಪರಿಭಾಷೆ. ಈಗ ತಾನಗಳನ್ನು ವಿವಿಧ ಲಯಗಳಲ್ಲಿ ವಿವಿಧ ಜತಿಗಳಲ್ಲಿ, ವಿವಿಧ ನಡೆಗಳಲ್ಲಿ ಹಾಡಿ ನುಡಿಸಲಾಗುತ್ತದೆ. ಪಲ್ಲವಿಯ ಪ್ರಸ್ತುತಿಯಲ್ಲಿ ರಾಗಾಲಾಪನೆಯ ನಂತರ ಹಾಡಿ – ನುಡಿಸುವ ತಾನಕ್ಕೂ ದೀರ್ಘ ಪರಂಪರೆಯಿದೆ. ವೀಣಾ ಸಂಪ್ರದಾಯದಲ್ಲಿ ಭಜಾವಳಿ (ದೀರ್ಘಸ್ವರ ಪ್ರಧಾನ), ಉದಟಿ (ಹ್ರಸ್ವಸ್ವರ ಪ್ರಧಾನ) ಉಗ್ರ (ಲಂಘನಗಳಿರುವ ದೀರ್ಘಸ್ವರ ಪ್ರಯೋಗ), ಮತ್ತು ಸಂಚಾರಿ (ವಿಲಂಬ ಮತ್ತು ದ್ರುತ ಲಯಗಳ ಪ್ರಯೋಗ) ಎಂದು ವಿಂಗಡಿಸುತ್ತಿದ್ದರು. ಇವುಗಳ ಅಭ್ಯಾಸದಿಂದ ಪ್ರೌಢವಾದ ಎಡ–ಬಲ ಹಸ್ತವ್ಯಾಪಾರಗಳು ಸಿದ್ಧಿಸುತ್ತಿದ್ದವು. ಘನಪಂಚಕ ರಾಗಗಳಾದ ನಾಟಿ, ಗೌಳ, ಆರಭಿ, ವರಾಳಿ ಮತ್ತು ಶ್ರೀರಾಗಗಳಲ್ಲಿಯೂ ಇನ್ನಿತರ ಅನೇಕ ರಾಗಗಳಲ್ಲಿಯೂ ವಿವಿಧ ಸ್ಥಾಯಿ, ಲಯ, ಗತಿ, ಕಾಲಗಳಲ್ಲಿ ಒಂದೊಂದಕ್ಕೂ ಮೂವತ್ತು ತಾನಗಳನ್ನಾದರೂ ಅಭ್ಯಾಸ ಮಾಡಿ ನುಡಿಸಬೇಕಾಗಿತ್ತು. ತಾನಗಳನ್ನು ವಿವಿಧ ಜಂತುಗಳ ಗತಿವೈಶಿಷ್ಟ್ಯವನ್ನು ಅನುಸರಿಸುವ

ಮಾನವ, ಗಜ, ಅಶ್ವ, ಮಯೂರ, ಮರ್ಕಟ, ಮಂಡೂಕ, ಕುಕ್ಕುಟ, ಮತ್ತು ಚಕ್ರ ಎಂಬ ಎಂಟು ಬಗೆಯ ತಾನಗಳನ್ನು ಹಿಂದಿನವರು ಗಾಯನವಾದನಗಳಲ್ಲಿ ತಾಳಸಹಿತವಾಗಿ ಮತ್ತು ತಾಳರಹಿತವಾಗಿ ಪ್ರಸ್ತುತಿಗೊಳಿಸುತ್ತಿದ್ದರು. ಕರ್ಣಾಟಕದ ವೈಣಿಕರು ಛತ್ತೀಸ (=36) ತಾನಗಳೆಂಬ ಚಿತ್ರವಿಚಿತ್ರ ತಾನಗಳನ್ನು ನುಡಿಸುವ ಪಾಂಡಿತ್ಯವನ್ನು ಗಳಿಸಿಕೊಂಡಿದ್ದರು. ಅವುಗಳಲ್ಲಿ ಮೇಲೆ ಹೇಳಿದ ತಾನಗಳು ಸೇರಿಕೊಂಡಿವೆ.

ತಾಳಗಳಲ್ಲಿ : ಪುಂಡರೀಕ ವಿಠ್ಠಲನು 86 ದೇಶೀ ತಾಳಗಳನ್ನು ತನ್ನ ನರ್ತನನಿರ್ಣಯದ ಮೊದಲನೆಯ ತಾಲಧಾರಿ ಪ್ರಕರಣದಲ್ಲಿ ಹೆಸರಿಸಿದ್ದಾನೆ. ಅದರಲ್ಲಿ ಪಶು–ಪಕ್ಷಿಗಳ ಹೆಸರುಗಳನ್ನು ಮಾತ್ರ ಇಲ್ಲಿ ನೀಡಲಾಗುವುದು. ಶರಭರಾಜ, ಭ್ರಮರ, ಗಜಲೀಲ, ಕಂಕ, ಮಯೂರ, ಮೃಗರಾಜ, ಮಕರಭ್ರಮ, ಸಿಂಹ, ಹಯಲೀಲಾ, ಗಜತಾಲ, ಸಿಂಹಲೀಲ, ಹಂಸಲೀಲ, ಶರಭಲೀಲ. ನರ್ತನನಿರ್ಣಯದಲ್ಲಿ ಹೇಳಿದ ಶರಭರಾಜ, ಭ್ರಮರ, ಕಂಬುಕ, ಕಂಕ, ಮಯೂರ, ಮೃಗರಾಜ, ಮಕರಭ್ರಮ ತಾಳಗಳಿಗೆ ಅನ್ಯತ್ರ ಲಕ್ಷಣಗಳನ್ನು ಹೇಳಿಲ್ಲ. ನರ್ತನನಿರ್ಣಯದಲ್ಲಿ 46ನೆಯ ತಾಳವಾಗಿ ಹೇಳಿದ ಮಯೂರತಾಳದಲ್ಲಿ ನಾಲ್ಕು ದ್ರುತಗಳು, ಲಘು, ನಾಲ್ಕು ದ್ರುತಗಳು, ಲಘು, ದ್ರುತ, ಲಘು, ದ್ರುತ, ಲಘುಗಳು ಇವೆ– 0000।0000।0।0।. ಇದರಲ್ಲಿ ರಚಿಸುವ ಪ್ರಬಂಧವು ಯಥಾಕ್ಷರವಾಗಿರುತ್ತದೆ.

ಅಭಿನಯಹಸ್ತಗಳಲ್ಲಿ : ನರ್ತನನಿರ್ಣಯದ ನಾಲ್ಕನೆಯ ಪ್ರಕರಣ (302 ಶ್ಲೋ.) – ನರ್ತಕ (ನೃತ್ತ)ದಲ್ಲಿ ಪಂಡರೀಕ ವಿಠ್ಠಲನು ನರ್ತನದಲ್ಲಿ ರಕ್ತಿ ಹುಟ್ಟಿಸಿ, ಅಪರೋಕ್ಷವಾಗಿ (ನೇರವಾಗಿ) ಅರ್ಥವನ್ನು ತಿಳಿಸುವ, ಹೆಜ್ಜೆಯವಲ್ಲದ (– ಎಂದರೆ ಕೈ) ಬೆರಳುಗಳನ್ನು ವಿಶೇಷ ರೀತಿಯಲ್ಲಿ ವಿನ್ಯಾಸ ಮಾಡುವುದನ್ನು ಹಸ್ತವೆಂದು ಸ್ಮರಿಸಿದ್ದಾನೆ. ಅದು ಅಸಂಯುತ, ಸಂಯುತ, ನೃತ್ತ ಎಂಬ ಶಬ್ದಗಳು ಮೊದಲಿನಲ್ಲಿರುವುದರಿಂದ ಮೂರು ಬಗೆ. ಎಲ್ಲಿ ಒಂದೇ ಹಸ್ತದಿಂದ ಅರ್ಥವು ಪ್ರಕಾಶಪಡುತ್ತದೋ ಅದು ಅಸಂಯುತ ಹಸ್ತವಾಗುತ್ತದೆ. (ಶ್ಲೋ. 303). ಎರಡು ಹಸ್ತಗಳಿಂದ ಸೇರಿ ಅರ್ಥವು ಪ್ರಕಾಶಪಟ್ಟರೆ ಅದು ಸಂಯುತ ಹಸ್ತವಾಗುತ್ತದೆ. ಎರಡು ಹಸ್ತಗಳನ್ನು ವಿಶೇಷ ರೀತಿಯಲ್ಲಿ ಪ್ರಯೋಗಿಸುವುದು ನೃತ್ತಹಸ್ತವೆಂದು ಕರೆಯಲ್ಪಡುತ್ತದೆ. ನೃತ್ತಹಸ್ತಗಳಲ್ಲಿ – ಹೆಬ್ಬೆರಳು ಬಾಗಿ ತೋರು ಬೆರಳಿನ ಬುಡವನ್ನು ಆಶ್ರಯಿಸಿ ಉಳಿದ ಬೆರಳುಗಳನ್ನು ಒಟ್ಟು ಸೇರಿಸಿ ಚಾಚಿದ್ದರೆ ಅದು ಪತಾಕ ಹಸ್ತವಾಗುತ್ತದೆ. ಪತಾಕಹಸ್ತದಲ್ಲಿ ಅನಾಮಿಕೆ ಬೆರಳು ಕೊಂಕಿದರೆ ತ್ರಿಪತಾಕ ಹಸ್ತವಾಗುತ್ತದೆ. ತ್ರಿಪತಾಕ ಹಸ್ತದಲ್ಲಿ ತರ್ಜನೀಮಧ್ಯಮಾಗಳನ್ನು ಬೇರೆ ಬೇರೆಯಾಗಿ ಬಿಡಿಸಿದ್ದರೆ 'ಕರ್ತರಿ' ಎಂಬ ಅಸಂಯುತ ಹಸ್ತವಾಗುತ್ತದೆ. ಕರ್ತರಿಯ ಅನಾಮಿಕೆ ಅಂಗುಷ್ಠಗಳು ತುದಿಯಲ್ಲಿ ಕೂಡಿದ್ದರೆ ಅದು 'ಮಯೂರಹಸ್ತ'ವಾಗುತ್ತದೆ.

ಗತಿಗಳಲ್ಲಿ : ಮಾಯೂರೀ, ಭಾನವಿ, ಮೈನವಿ, ಹಯಲೀಲಾ, ಮೃಗೀ, ಹಂಸೀ, ಕುಕ್ಕುಟೀ, ಖಂಜನೀ(=ಗೀಜಗನ ಹಕ್ಕಿ), ಗಜಗಾಮಿನೀ ಎಂಬ ಗತಿಗಳನ್ನು ಪುಂಡರೀಕ ವಿಠ್ಠಲನು ನರ್ತನನಿರ್ಣಯದ ನಾಲ್ಕನೆಯ ನರ್ತಕ (ನೃತ್ತ) ಪ್ರಕರಣದ 700 ನೆಯ ಶ್ಲೋಕದಲ್ಲಿ ಹೇಳಿ, ಇವುಗಳನ್ನು ತಜ್ಞರು ಕ್ರಮವಾಗಿ ಸಂಪ್ರದಾಯಕ್ಕೆ ಅನುಸಾರವಾಗಿ ತೋರಿಸಬೇಕು ಎಂದು ಹೇಳಿದ್ದಾನೆ. ನವಿಲುಗರಿಯ ಕಣ್ಣಿನ (ಬರ್ಹಕಲಾ) ಆಕಾರದಲ್ಲಿ ಮೇಲುಗಡೆಗೆ ಮಾಡಿ ಪಾದಗಳನ್ನು ನಿಧಾನವಾಗಿ ಎತ್ತಿ ಎತ್ತಿ ಇಡುವುದರಿಂದ ಮಾಯೂರೀಗತಿ (ನವಿಲಿನ ಕುಣಿತವು) ಆಗುತ್ತದೆ. (ಶ್ಲೋ. 703 – 704) (ಸಂಗೀತದರ್ಪಣದಲ್ಲಿ ಈ ಗತಿಯನ್ನು ಮತಾಂತರದಿಂದ ಸಂಗ್ರಹಿಸಿದೆ.)

ಸ್ವರಾಭಿನಯದಲ್ಲಿ : ಷಡ್ಜ ಸ್ವರವು ಮಯೂರದಿಂದ ಹೊರಟಿದೆಯೆಂದು ಸಂಗೀತಶಾಸ್ತ್ರಗಳು ಉಲ್ಲೇಖಿಸುತ್ತವೆ. ನರ್ತನನಿರ್ಣಯದ ನಾಲ್ಕನೆಯ ನರ್ತಕ (ನೃತ್ತ) ಪ್ರಕರಣದಲ್ಲಿ, 800 ನೆಯ ಶ್ಲೋಕದಲ್ಲಿ ಪಂಡರೀಕ ವಿಠ್ಠಲನು ಸ್ವರಾಭಿನಯವನ್ನು ಯಾವ ಗೀತಕ್ಕೆ ಯಾವ ರಾಗವಿದೆಯೋ, ಆ ರಾಗಕ್ಕೆ ಷಡ್ಜವಲ್ಲದ, ಬೇರೆ ಯಾವ ಗ್ರಹಸ್ವರವಿದೆಯೋ ಅದನ್ನು ಇಲ್ಲಿ ಹಸ್ತಗಳಿಂದ ಅಭಿನಯಿಸಬೇಕು ಎಂದು ಹೇಳಿದ್ದಾನೆ. ಬಲದಲ್ಲಿ ಅಲಪದ್ಮದಿಂದ(ಅಂಗೈಯು ಪಕ್ಕಕ್ಕೆ ತಿರುಗಿ ಬೆರಳುಗಳನ್ನೆಲ್ಲ ತಿರುಗಿಸಿದರೆ ಅಲಪಲ್ಲವವಾಗುತ್ತದೆ. ಅಲಪಲ್ಲವ ಹಸ್ತಕರಣವು ತಿರುಗುಮುರುಗಾದರೆ ಅಲಪದ್ಮಹಸ್ತವಾಗುತ್ತದೆ–ಎಂದರೆ ಕಿರುಬೆರಳಿನಿಂದ ಆರಂಭಿಸಿ ಎಲ್ಲ ಬೆರಳುಗಳನ್ನೂ ಹೊರಮುಖವಾಗಿ ತಿರುಗಿಸಿದರೆ ಅಲಪಲ್ಲವವಾಗುತ್ತದೆ. ಅಥವಾ, ವ್ಯಾವರ್ತಿತವೆಂಬ {ಮತಾಂತರದಲ್ಲಿ ಪರಿವರ್ತಿತವೆಂಬ} ನೃತ್ತಕರಣವನ್ನು ಮಾಡಿ ಕೈಬೆರಳುಗಳನ್ನು ಮಾಡಿ ಕೈಬೆರಳುಗಳು ಪಾರ್ಶ್ವದಲ್ಲಿ ತಿರುಗಿ ನಿಂತರೆ ಅದು ಅಲಪಲ್ಲವ). ಎಡದಲ್ಲಿ ಚತುರದಿಂದ (ಚತುರವೆನ್ನುವುದು ಭ್ರೂಭೇದಗಳಲ್ಲಿಯೂ ಒಂದು. ಎರಡು ಹುಬ್ಬುಗಳೂ ಒಂದು ಇನ್ನೊಂದರೊಡಗೂಡಿ ಸ್ವಲ್ಪವಾಗಿ ಅದುರಿ ಬಾಗಿದರೆ ಚತುರಾ ಎಂಬ ಭ್ರೂಭೇದವಾಗುತ್ತದೆ.) ಮಂಡಲಾಕಾರದಲ್ಲಿ ಮಾಡಿದ ಮಯೂರಲಲಿತ ಕರಣದಿಂದ ನೃತ್ಯ ಲಕ್ಷ್ಯಲಕ್ಷಣ ಪಂಡಿತರು ಷಡ್ಜವನ್ನು ತೋರಿಸಬೇಕು ಎಂದು ಹೇಳಿದ್ದಾನೆ.

ಪ್ರಬಂಧದಲ್ಲಿ : ರಸ, ಭ್ರಮರ, ಹಂಸ, ಕುರರ, ಚಂದ್ರಲೇಖಾ, ಕುಂಜರ, ತಿಲಕ, ಹಂಸಕ್ರೀಡ, ಮಯೂರ ಎಂಬ ಒಂಬತ್ತು ಭೇದಗಳಿವೆ. ಸಮಪಾದಗಳಲ್ಲಿ ಮತ್ತು ವಿಷಮಪಾದಗಳಲ್ಲಿ ಇವು ಏರ್ಪಡುತ್ತವೆ. ಇವುಗಳನ್ನು ಅದಲುಬದಲು ಮಾಡುವುದರಿಂದ ಇನ್ನೂ ಬೇರೆ ಭೇದಗಳು ಹುಟ್ಟುತ್ತವೆ. ಪಾದದೈರ್ಘ್ಯವನ್ನು ಉಳಿಸಿಕೊಂಡು 5, 6, ಅಥವಾ 7 ಲಘುಗಳನ್ನುಳ್ಳ ಒಂದು ಶಿಖಾಪದವೆಂಬ ವರ್ಣಸಮುಚ್ಚಯವನ್ನು ರಚಿಸಿದರೆ ಅದಕ್ಕೆ ಶಿಖಾಪದ ದ್ವಿಪಥಕ ಅಥವಾ ಮಯೂರವೆಂದು ಹೆಸರು. ಇದರ ವಿವರಗಳನ್ನು ಶಾರ್ಙ್ಗದೇವನು ತನ್ನ ಸಂಗೀತರತ್ನಾಕರದ ನಾಲ್ಕನೆಯ ಅಧ್ಯಾಯದ 232 – 241 ಶ್ಲೋಕಗಳಲ್ಲಿ ನೀಡಿದ್ದಾನೆ. ದೋಧಕವೆಂಬ ಛಂದಸ್ಸನ್ನು ಪ್ರಾಕೃತ ಭಾಷೆಯಲ್ಲಿ ರಚಿಸಿದರೆ ಅದನ್ನು ದೋಹಾ ಎಂದು ಕರೆಯುತ್ತಾರೆ. ಹಿಂದೀ ಮತ್ತಿತರ

ಔತ್ತರೇಯ ಸಾಹಿತ್ಯಗಳಲ್ಲಿ ದೋಹಾ ಎಂಬ ಈ ಛಂದೋಪ್ರಕಾರವು ಈಗಲೂ ಬಳಕೆಯಲ್ಲಿದೆ. ಪ್ರಾಕೃತದ ದೋಹಾದಲ್ಲಿ ಸಾರಸ, ಭ್ರಮರ, ಹಂಸ. ಕುರರ, ಚಂದ್ರಲೇಖಾ, ಕುಂಜರ, ತಿಲಕ, ಹಂಸಕ್ರೀಡ, ಮಯೂರ ಎಂಬ ಒಂಬತ್ತು ಭೇದಗಳಿವೆ.

ಚಿತ್ರನೃತ್ಯಪ್ರಕಾರ : ಕೂಚಿಪೂಡಿಯಲ್ಲಿ ಮಯೂರವನ್ನು ಕಾಲಿನಿಂದ ಬರೆಯುತ್ತಾ ನರ್ತಿಸುವ ಮಯೂರ ಶಬ್ದವೊಂದಿದ್ದು; ಮಯೂರಕೌತ್ವ, ಮಯೂರ ಅಲರಿಪು ಇತ್ಯಾದಿಗಳನ್ನು ಕಾಲಕ್ರಮದಲ್ಲಿ ಭರತನಾಟ್ಯ ಕಲಾವಿದರೂ ಸಂಯೋಜಿಸಿದ್ದಾರೆ.

ಮಂಗಲಾಚರಣೆ

ಮನೋಜ್ಞವಾಗಿರುವ ಭಾರತೀಯ ಮಯೂರನೃತ್ಯವನ್ನು ನಮ್ಮ ಚಿತ್ತಪಟಲದಲ್ಲಿ ಹೀಗೆಂದು ಚಿತ್ರಿಸಿಕೊಳ್ಳಬಹುದು– 'ಚೈತ್ರಮಾಸ, ಮಥುರೆಯ ವ್ರಜದಲ್ಲಿ ರಾಸಲೀಲಾ ನೃತ್ಯವು ನಡೆಯುತ್ತಿದೆ. ಸುಂದರ ತರುಣ ತರುಣಿಯರಲ್ಲಿ ಅನೇಕರು ಮಯೂರವೀಣೆಯನ್ನು ಬಾಜಿಸುತ್ತಿದ್ದರೆ ಇನ್ನು ಕೆಲವರು ಮಯೂರ ಶಿರರೂಪದಿಂದ ಅಲಂಕರಿಸ್ಪಟ್ಟ ಕೊಳಲನ್ನು ಊದುತ್ತಿದ್ದಾರೆ. ಕೆಲವರು ಶ್ರುತಿಶುದ್ಧವಾಗಿ ಷಡ್ಜದಲ್ಲಿ ಶ್ರೀಕೃಷ್ಣ ಧ್ಯಾನವನ್ನು ಮಾಡುತ್ತಿದ್ದಾರೆ. ಕೆಲವರು ಮಯೂರವೀಣೆಯಲ್ಲಿ, ಬಸಂತ್ ಬಹಾರ್ ರಾಗದಲ್ಲಿ ಭಜಾವಳಿ, ಉದಟಿ, ಉಗ್ರ ಮತ್ತು ಸಂಚಾರೀ ಗತಿಗಳಲ್ಲಿ ಮಯೂರತಾನವನ್ನು ನುಡಿಸುತ್ತಿದ್ದರೆ, ಇನ್ನು ಕೆಲವರು ಮಯೂರತಾಲದಲ್ಲಿ ರಚಿತವಾದ ಶಿಖಾಪದ ದ್ವಿಪಥಕ ಮಯೂರದೋಹಾ ಪ್ರಬಂಧವನ್ನು ಗಾಯನ ಮಾಡುತ್ತಿದ್ದಾರೆ. ಮಯೂರದಂತೆ ಅಲಂಕಾರಯುತ ವೈಭವದ ಆಹಾರ್ಯವನ್ನು ಧರಿಸಿದ, ಮಯೂರಹಸ್ತವನ್ನು ಹಿಡಿದ ನರ್ತಕರು ಮಂಡಲಾಕಾರದಲ್ಲಿ ಮಾಡಿದ ಮಯೂರಲಲಿತ ಕರಣದಿಂದ ನರ್ತಿಸುತ್ತಿದ್ದಾರೆ. ನರ್ತನವು ತಾನದ ಹಾಗೂ ಪ್ರಬಂಧದ ಮಾಯೂರೀಗತಿಯ ಲಯಕ್ಕೆ ತಕ್ಕಂತೆ ನಡೆಯುತ್ತಿದೆ. ಮಯೂರದಂತೆ ನರ್ತಿಸಿ ಕೃಷ್ಣನು ರಾಧೆಯನ್ನು ಸಂತಸಗೊಳಿಸುತ್ತಿದ್ದಾನೆ. ಈ ಸುಸಮಯವನ್ನು ವೀಕ್ಷಿಸಲೆಂದೇ ಆಗಸದಲ್ಲಿ ಸಕಲ ದೇವತೆಗಳೂ, ಗಂಧರ್ವಯಕ್ಷಕಿನ್ನರಕಿಂಪುರುಷಾದಿಗಳೂ, ಋಷಿಮುನಿಗಳೂ ನೆರೆದಿದ್ದಾರೆ. ಪುಷ್ಪವೃಷ್ಟಿಯೋ ಎಂಬಂತೆ ವರುಣನು ವರ್ಷ ಸಿಂಚನವನ್ನು ಮಾಡುತ್ತಿದ್ದಾನೆ. ಈ ಗೀತವಾದ್ಯನರ್ತನೋತ್ಸವದ ಧುನಿಯ ಆನಂದಾಮೃತವರ್ಷದಿಂದ ವ್ರಜವು ತೋಯ್ದಿದೆ. ಗಿಡಮರಗಳು ಚಿಗುರಿವೆ, ಪಶುಪಕ್ಷಿಗಳು ಜೊತೆಜೊತೆಗೇ ಗಾಯನ – ನರ್ತನಗಳನ್ನು ಮಾಡುತ್ತಿವೆ, ಯಮುನೆಯೂ ಆಲಿಸುತ್ತಾ, ತನ್ನ ಜುಳು ಜುಳು ನಿನಾದದ ಶ್ರುತಿಗೂಡಿಸುತ್ತ ಮಂದಗತಿಯಲ್ಲಿ ಹರಿಯುತ್ತಿದ್ದಾಳೆ. ಇಳೆಯು ಕೃಷ್ಣ ರಾಧೆಯರ ಮಯೂರನರ್ತನದ ಪಾದಗತಿಯ ಈ ಅಮೃತಕ್ಷಣಗಳ ಸಂಭ್ರಮಕ್ಕೆ ಸಾಕ್ಷಿಯಾಗಿದ್ದಾಳೆ.'

ಆಕರ ಋಣ

ಎಸ್. ವಿ. ಭೀಮಭಟ್ಟ –ಧನಂಜಯ ವಿರಚಿತಃ ದಶರೂಪಕಂ (ಮೂಲಶ್ಲೋಕಗಳ ಅನುವಾದ, ಧನಿಕಕೃತಾವಲೋಕಸಾರಸಹಿತ)

ಭೀಷ್ಮ ಕುಕರೆತೀಯವರ (BC. Kukareti)ಯವರ ಲೇಖನ – ಇಂಟರ್‌ನೆಟ್ ನಿಂದ.

ಡಾ. ಶಿವ ನಂದ ನೌಟಿಯಾಲ್ ಅವರ ಗೀತ

John Lockwood Kipling — Beast and Man in India.

ರಾ. ಸತ್ಯನಾರಾಯಣ –ಪುಂಡರೀಕಮಾಲಾ.

ರಾ.ಸತ್ಯನಾರಾಯಣ – ಕರ್ಣಾಟಕಸಂಗೀತವಾಹಿನಿ.

Nandita Krishna - Sacred Animals of India.

Dr. Vishnulok Bihari Srivastava

Dictionary of Indology : Detailed description of Indian Scriptures. Sanskrit

https://si.m.wikibooks.org/wiki/Mayura_Sandesa-INTRODUCTION

https://www.chinaodysseytours.com/special-topic-about-china/peacock-dance-of-dai-minority.html

https://www.revolvy.com/page/Peacock-dance

ಮಯೂರ ನೃತ್ಯದ ಕೆಲವು ವಿಡಿಯೋ ಅಂತರ್ಜಾಲ ಲಿಂಕ್‌ಗಳು

https://youtube/LvhBwwuEGS4
ಚೀನಾದೇಶದ ಮಯೂರ ನೃತ್ಯ –ಮಯೂರ ರಾಜಕುವರಿ ಯಾಂಗ್ ಲೀ ಪಿಂಗ್ ರವರಿಂದ.

https://youtu.be/4hJOOxkCcyU - ಚೀನಾ ದೇಶದ ಮಯೂರನೃತ್ಯ.

http://www.cctv.com/english/special/ethnicich/20090811/102399.shtml

https://youtu.be/69VDjpUBbz4 – ಆಫ್ರಿಕಾ ಖಂಡದ ಘಾನ ದೇಶದ ಮಯೂರನೃತ್ಯ.

https://youtu.be/iRSzXbHCbQY – ಲಿವಿಯಾ ವನವರ್‌ರವರ ಮಯೂರನೃತ್ಯ.

https://youtu.be/PtjZYWDnp6Y – ಚೈನಾ ದೇಶದ ಯುಗಳ ಮಯೂರನೃತ್ಯ.

https://youtu.be/Etm4Q2GKnsA ಮತ್ತು https://youtu.be/7c84w7J7eMs – ಇವೆರಡು ಲಿಂಕ್‌ಗಳು ಕಾಂಬೋಡಿಯಾದ 'ಖ್ಮೇರ್ ಪಿಲ್ಲೈನ್' ಮಯೂರನೃತ್ಯದವು.

https://youtu.be/Fbz4kKmO4_U – ಕಾಂಬೋಡಿಯಾದ ಮಯೂರನೃತ್ಯ.

<u>ಮಯೂರ ನೃತ್ಯಗೀತ</u> : ಮೂಲ : ಕೇಶವ್ ಅನುರಾಗಿ.
ಅನುವಾದ : ಭೀಷ್ಮ ಕುಕರೆತಿ.
ಡಾ. ಶಿವಾನಂದ ನೌಟಿಯಾಲರ - 'गढ़वाल के लोक नृत्य-गित्' ಪುಸ್ತಕದಿಂದ ಮೂಲ ಗೀತೆ)

ह्युंचळी डांड्यु की चली हिंवाळी कन्कोर
रंगमतु ह्वे , नचण लगे मेरा मन का मोर

धौळी गंगा का छाळू पाणी भगीरथी कजोळ
देवप्रयाग रघुनाथ मन्दिर नथुली सि पंवोर
ह्युंचळी डांड्यु की चली हिंवाळी कन्कोर
रंगमतु ह्वे , नचण लगे मेरा मन का मोर

आरू, घिंघारू , बांज , बुरां सकिनी झका झोर
लखिपाखे बण मांग बिरड़ी चकोरी की चकोर
ह्युंचळी डांड्यु की चली हिंवाळी कन्कोर
रंगमतु ह्वे , नचण लगे मेरा मन का मोर

डांड का रसूली कूळईं झुप झुपा चंवोर
ऊंची डांडी चौडंडी बथों गैरी गंगा भंवोर
ह्युंचळी डांड्यु की चली हिंवाळी कन्कोर
रंगमतु ह्वे , नचण लगे मेरा मन का मोर

बसुधारा को ठंडो पाणी केदार को ठौर
त्रिजुगी नारेण तख बद्री सिर मौर
ह्युंचळी डांड्यु की चली हिंवाळी कन्कोर
रंगमतु ह्वे , नचण लगे मेरा मन का मोर

राजों की डंड्याळी मोर नाचो खुटी अळगैकि गात फरकैकि
रंगमतो ह्वेक मोर नाचो राजों की डंड्याळी मोर नाचो
सौ बानिक रूप दिखैकि मस्ती मां कूदो
मस्ती मा रैकि, पंख फैलैकि मोर नाचो

राजों की डंड्याळी मोर नाचो"

ಭರತ ಕೌತುಕ

ವಿದುಷಿ ರೋಹಿಣಿ ಸುಬ್ಬರತ್ನಂ ನಾಡಿನ ಸುವಿಖ್ಯಾತ ವಿದ್ವಾಂಸರಾದ ಮಹಾಮಹೋಪಾಧ್ಯಾಯ ಡಾ. ರಾ. ಸತ್ಯನಾರಾಯಣ ಅವರ ಸುಪುತ್ರಿ, ಉಪ್ಪಿನಂಗಡಿಯ ಕಾಂಚನ ಎಂಬ ಊರನ್ನು ಸಂಗೀತ ವಿಶ್ವವಿದ್ಯಾಲಯವಾಗಿ ಪರಿವರ್ತಿಸಿ ಗ್ರಾಮಕ್ಕೆ ಕಲೆಯ ಸಂಸರ್ಗದ ಮೂಲಕ ಮನ್ನಣೆ ತಂದುಕೊಟ್ಟ ಕಾಂಚನ ಸುಬ್ಬರತ್ನಂ ಅವರ ಪತ್ನಿ. ಅವರ ಮೂವರು ಸುಪುತ್ರಿಯರು ಶ್ರೀರಂಜನಿ, ಶ್ರುತಿರಂಜನಿ, ಸುಮನಸರಂಜನಿ ಸಂಗೀತಕಲಾವಿದರು. ನಾಡಿನ ಆಢ್ಯ ಸಂಗೀತ ಮನೆತನ ರೋಹಿಣಿಯಮ್ಮನವರದ್ದು.

ನೂಪುರ ಭ್ರಮರಿಯ ಆತ್ಮೀಯ ಬಳಗದವರಲ್ಲೊಬ್ಬರಾಗಿ ನಮ್ಮನ್ನು ಮುನ್ನಡೆಸುತ್ತಿರುವ ವಯೋವೃದ್ಧೆ, ಜ್ಞಾನವೃದ್ಧೆ ನಮ್ಮ ರೋಹಿಣಿಯಮ್ಮ. ಈಗಾಗಲೇ ವಾಟ್ಸಾಪ್ ಗುಂಪುಗಳಲ್ಲಿ ಅವರೀಯುತ್ತಿರುವ ಅನೇಕ ಕಲಾವಿಶೇಷ ವಿಚಾರಗಳು ಬಹುಮನ್ನಣೆಯನ್ನು ಪಡೆದಿವೆ. ಸಮಯದ ಅಭಾವದ ಜಂಜಾಟಗಳಲ್ಲಿ ಓದಿಗೆ ನಿಲುಕದೆಯೇ ಗ್ರಂಥಸ್ಥವಾಗಿ ಉಳಿದುಹೋಗುವ ಮತ್ತು ಸಮಕಾಲೀನ ಕಲಾಪರಂಪರೆಯನ್ನು ಪರಿಣಾಮವಕಾರಿಯಾಗಿ ಅರಿಯುವ ನಿಟ್ಟಿನಲ್ಲಿ ಅವಶ್ಯವಿರುವ ಅನೇಕ ಕುತೂಹಲಕಾರಿ ವಿಚಾರಗಳನ್ನು ಗ್ರಂಥಗಳಿಂದ ಆರಿಸಿ ಸುಲಭವಾಗಿ ತಲುಪುವಂತೆ ನೀಡುವ ಅವರ ಕಳಕಳಿ, ಪ್ರಯತ್ನ ಸ್ತುತ್ಯರ್ಹ. ಅವರನ್ನು ನೂಪುರದ ಅಂಗಳಕ್ಕೆಳೆಯುವುದರಿಂದ ನಮಗಾಗುವ ಅರಿವಿನ ಲಾಭ ಅನೇಕ. ಕಳೆದ ಮೂರು ಸಂಚಿಕೆಗಳಿಂದಲೂ 'ಭರತಕೌತುಕ' ಎಂಬ ಅಂಕಣದ ಮೂಲಕ ಪ್ರಾಚೀನ ಕಲಾವಿಷಯಗಳ ಕೌತುಕವನ್ನು ದರ್ಶನ ಮಾಡಿಸುತ್ತಿದ್ದಾರೆ. ಪ್ರಸ್ತುತ ಈ ಸಂಚಿಕೆಯಲ್ಲಿ ತಮ್ಮ ತಂದೆಯವರೂ, ಗುರುಗಳೂ ಆದ ಮಹಾಮಹೋಪಾಧ್ಯಾಯ ರಾ. ಸತ್ಯನಾರಾಯಣ ಶರ್ಮರಿಗೆ ಈ ಲೇಖನವನ್ನು ಸಮರ್ಪಿಸುತ್ತಿರುವ ಲೇಖಿಕೆಯವರು ಮಯೂರನೃತ್ಯಗಳ ಕುರಿತು ಸೋದಾಹರಣವಾಗಿ ಸಂಶೋಧನ ಲೇಖನ ಬರೆದಿದ್ದಾರೆ. ಅಧ್ಯಯನಾರ್ಥಿಗಳು ಸದುಪಯೋಗಪಡಿಸಿಕೊಳ್ಳಿರೆಂದು ಪ್ರಾರ್ಥನೆ.

ಮಯೂರ ನೃತ್ಯ

'ನಮಸ್ತಸ್ಮೈ ಗಣೇಶಾಯ ಯತ್ಕಂಠಃ ಪುಷ್ಕರಾಯತೇ ।

ಮದಾಭೋಗಘನಧ್ವಾನೋ ನೀಲಕಂಠಸ್ಯ ತಾಂಡವೇ ॥'

ಅನ್ವಯಾರ್ಥ : ನೀಲಕಂಠಸ್ಯ – ಕಂಠದಲ್ಲಿ ಧರಿಸಿದ್ದರಿಂದ ಕಪ್ಪಾದ ಕಂಠವುಳ್ಳ ಈಶ್ವರನ, ತಾಂಡವೇ – ತಾಂಡವವೆಂಬ ಉದ್ಧತನೃತ್ಯದಲ್ಲಿ, ಮದಾಭೋಗಘನಧ್ವಾನಃ – ಮದದ ಪರಿಪೂರ್ಣತೆಯಿಂದ ಗಂಭೀರವಾದ ಧ್ವನಿಯುಳ್ಳ, ಯತ್ಕಂಠಂ – ಯಾವ ಗಣೇಶನ ಕಂಠವು,

ಪುಷ್ಕರಾಯತೇ – ಮೃದಂಗದಂತೆ ಆಚರಿಸುತ್ತಿದೆಯೋ (ಧ್ವನಿಗೈಯ್ಯುತ್ತಿದೆಯೋ!) ತಸ್ಮೈ – ಅಂತಹ, ಗಣೇಶಾಯ – ಗಣೇಶನಿಗೆ, ನಮಃ – ನಮಸ್ಕಾರ.

ತಾತ್ಪರ್ಯದ ವಿಶೇಷಾಂಶ – ಧನಂಜಯನು ರಚಿಸಿದ 'ದಶರೂಪ' ಗ್ರಂಥದಲ್ಲಿರುವ ಪ್ರಥಮ ಮಂಗಲಾಚರಣೆಯ ಶ್ಲೋಕವಿದು. ಈಶ್ವರನು ಮಾಡುವ ತಾಂಡವವೆಂಬ ಉದ್ಧತನೃತ್ಯದಲ್ಲಿ ಗಂಭೀರವಾದ ನಿನಾದದಿಂದ ಗಣೇಶನು ಮೃದಂಗದಂತೆ ಧ್ವನಿ ಮಾಡುತ್ತಿದ್ದಾನೆ. ಅಂತಹ ಗಣೇಶನನ್ನು ಗ್ರಂಥಕರ್ತನು ನಮಸ್ಕರಿಸಿದ್ದಾನೆ. ಶ್ಲೇಷಾರ್ಥವುಳ್ಳ ಈ ಶ್ಲೋಕದಲ್ಲಿ ನೀಲಕಂಠ ಎಂದರೆ ನವಿಲು, ಘನಧ್ವಾನ ಎಂದರೆ ಮೋಡದ ಘರ್ಜನೆ ಎಂದು ಅರ್ಥವಿದೆ. ಮೋಡದ ಗುಡುಗನ್ನು ಕೇಳಿದಾಗ ನವಿಲು ಕುಣಿಯುತ್ತದೆ ಎಂಬ ಕವಿಸಮಯವಿದೆ. ಮೇಘಧ್ವನಿಯನ್ನು ಕೇಳಿ ಮಯೂರವು ತಾಂಡವ ನೃತ್ಯ ಮಾಡುವಂತೆ ಎಂದು ಶ್ಲೋಕದ ಉತ್ತರಾರ್ಧದಲ್ಲಿ ಖಂಡಶ್ಲೇಷದಿಂದ ಉಪಮೆಯ ಛಾಯೆಯು ತೋರುತ್ತದೆ.

'ಮಯೂರಾ ನೃತ್ಯಂತೋ ಮೇಘಾಗಮೇ ಸಮಂತತಃ ॥

(ಭರತಮುನಿಯ ನಾಟ್ಯಶಾಸ್ತ್ರ – 'ಮೇಘಗಳು ಆವರಿಸಿದ್ದಕ್ಕೆ ನವಿಲುಗಳು ಸುತ್ತಲೂ ಕುಣಿಯುತ್ತಿವೆ' – ಪ್ರತಿಷ್ಠಾ ಛಂದಸ್ಸಿನ ವಿಜಯಾ ವೃತ್ತದ ಧ್ರುವಾದ ಪಾದವೊಂದಿದು).

ಭಾರತದಲ್ಲಿ ಶಿಷ್ಟ ರಂಗಭೂಮಿ ಕಲೆಗಳ ಆಶಯಗಳು, ಉದ್ದೇಶಗಳು, ರೀತಿಗಳು ರಾಜರ ಆಡಳಿತ, ಆಕ್ರಮಣ ಮುಂತಾದ ಕಾರಣಗಳಿಂದ ಕಾಲದಿಂದ ಕಾಲಕ್ಕೆ ಬದಲಾಗುತ್ತ, ವ್ಯತ್ಯಾಸವಾಗುತ್ತಾ, ಪರಮತಗಳ ಪ್ರಭಾವಗಳು ಅನೇಕವಾದರೂ, ತಮ್ಮ ಜೀವನಕ್ಕೆ ಉಪಯುಕ್ತವಾದದ್ದನ್ನೆಲ್ಲ ದೇವರೆಂದೇ ಅಥವಾ ದೇವರು ಕಳುಹಿಸಿದ ಭಾಗ್ಯವೆಂದೇ ನಂಬಿ ಆರಾಧಿಸುತ್ತ ಬಂದ ಜನಪದರ ಜಾನಪದ ಗೀತ – ನೃತ್ಯಗಳೆಷ್ಟೋ ತಮ್ಮ ದೈವಾರಾಧನೆಯ ಅಂಗವಾಗಿದ್ದ ತಮ್ಮ ಕಲೆಗಳ ಸ್ವರೂಪವನ್ನು ಉಳಿಸಿಕೊಂಡು ಬಂದವು. ಹಾಗೆಂದೇ ಭಾರತೀಯ

ಸಂಗೀತಶಾಸ್ತ್ರಜ್ಞರು ಪ್ರಾಚೀನದಿಂದಲೂ ತಮ್ಮ ಶಾಸ್ತ್ರಗ್ರಂಥಗಳಲ್ಲಿ ಮಾರ್ಗ ಸಂಗೀತ – ನೃತ್ಯಾದಿಗಳೊಂದಿಗೆ ದೇಶೀ ಸಂಗೀತ – ನೃತ್ಯಗಳನ್ನೂ ಹೇಳುತ್ತಲೇ ಬಂದಿದ್ದಾರೆ. ದೇಶೀ ಸಂಗೀತನರ್ತನಾದಿಗಳಲ್ಲಿ ಆಯಾ ಕಾಲದಲ್ಲಿ, ಆಯಾ ಪ್ರಾಂತೀಯ ದೇಶೀ ಜನಪದರಲ್ಲಿ ಪ್ರಯುಕ್ತವಾಗುತ್ತಿದ್ದ ಸಂಗೀತ ನರ್ತನಾದಿಗಳನ್ನೆಷ್ಟೋ ವರ್ಣಿಸಿದ್ದಾರೆ. ಅದರಲ್ಲಿ ಮಯೂರನೃತ್ಯವೂ ಒಂದು.

ಮಯೂರದ ಪರ್ಯಾಯ ನಾಮಗಳು

ಭಾರತಾದ್ಯಂತ ವಿವಿಧ ಭಾಷೆಗಳಲ್ಲಿ ನವಿಲು ಅನೇಕ ಹೆಸರುಗಳನ್ನು ಹೊಂದಿದೆ. ಸಂಸ್ಕೃತದಲ್ಲಿ 'ಮಯೂರ, ಭುಜಂಗಭುಕ್ ಅಥವಾ ಭುಜಂಗಭೋಗಿನ್, ಮೇಘನಂದ, ಶಿಖಿವಾಲ, ಚಂದ್ರಕಿನ್, ನೀಲಕಂಠ, ಕೇಕಿನ್, ಶಿಖಂಡಿನ್, ಚಿತ್ರಪಿಚ್ಛಕ' ಇತ್ಯಾದಿ ಅನೇಕ ಹೆಸರುಗಳು ನವಿಲಿಗಿವೆ. ವಿಷಯುಕ್ತ ಸರ್ಪಗಳನ್ನು ತಿನ್ನುವುದರಿಂದ, ಈ ಪಕ್ಷಿಯ ಕುತ್ತಿಗೆಯು ಶಿವನಂತೆ ನೀಲಿಯಾಗಿದೆಯೆಂದು ಮಯೂರಕ್ಕೆ 'ನೀಲಕಂಠ'ನೆಂಬ ಹೆಸರು. ಹಿಂದಿ, ಉರ್ದು, ಪಂಜಾಬಿ, ಗುಜರಾತಿ, ಮತ್ತು ಮರಾಠಿಗಳಲ್ಲಿ 'ಮೋರ್' ಎಂದೂ, ತೆಲುಗಿನಲ್ಲಿ 'ನೇಮಲಿ' ಎಂದೂ, ತಮಿಳು, ಮಲಯಾಳಗಳಲ್ಲಿ 'ಮಯಿಲ್' ಎಂದೂ, ಬೆಂಗಾಲೀ ಮತ್ತು ಒರಿಸ್ಸಾ ಭಾಷೆಗಳಲ್ಲಿ 'ಮಯೂರ್' ಎಂದೂ, ಮಣಿಪುರಿಯಲ್ಲಿ 'ಬಾಹೌದ್' ಎಂದೂ ಭೂಟಿಯಾದಲ್ಲಿ 'ಮಂಜ' ಅಥವಾ 'ಮೇಜ'ವೆಂದೂ ರಾಜಸ್ಥಾನೀ ಭಾಷೆಯಲ್ಲಿ 'ಮೋರ್ಲ' ಎಂದೂ ಸಿಂಧೀಯಲ್ಲಿ 'ಮುರ್' ಎಂದೂ ಕರೆಯುತ್ತಾರೆ. ನೇಪಾಳೀಯಲ್ಲಿ 'ಮಜೂರ್' ಎಂದೂ, ಸಿಂಹಳೀಯದಲ್ಲಿ 'ಮೊನರಾ' ಎಂದೂ ಪರ್ಶಿಯನ್ ಭಾಷೆಯಲ್ಲಿ 'ಟಾವುಸ್' ಎಂದೂ, ಫ್ರೆಂಚ್‌ನಲ್ಲಿ

'ಪಿಯೊನ್' ಎಂದೂ ಲ್ಯಾಟಿನ್ ಹಾಗೂ ಗ್ರೀಕ್ ಭಾಷೆಗಳಲ್ಲಿ 'ಪಾವೊ' ಎಂದೂ , ಇಂಗ್ಲಿಷ್‌ನಲ್ಲಿ ಪಿಕಾಕ್ ಎಂದೂ ಕರೆಯುತ್ತಾರೆ.

ಕಾವ್ಯ– 'ಮಯೂರ ಸಂದೇಶ'

ತನ್ನ ಸೌಂದರ್ಯದಿಂದಲೂ ಕಥಾವಸ್ತುಗಳಿಂದಾಗಿಯೂ ಸಾಮಾನ್ಯವಾಗಿ ಎಲ್ಲ ಕಾವ್ಯಗಳಲ್ಲಿಯೂ, ಲಲಿತಕಲೆಗಳಲ್ಲಿಯೂ ಮಯೂರವು ಕಂಡುಬರುತ್ತದೆ. ಸೌಂದರ್ಯ ಹಾಗೂ ಅರಣ್ಯವನಗಳ ಕುರುಹಾಗಿರುವ ನವಿಲಿನ ನಡಿಗೆ, ನಾಟ್ಯ, ಕೊರಳಿನ ಕೊಂಕು, ಸಾಸಿರ ಕಣ್ಣುಗಳು, ಅದರ ವರ್ಣರಂಜಿತ ದೇಹ– ಇತ್ಯಾದಿಗಳು ಕವಿಗಳ ಕಾವ್ಯರಚನೆಗೆ, ಸ್ತ್ರೀಯರ ಸೌಂದರ್ಯ ವರ್ಣನೆಗೆ, ಶ್ರೇಷ್ಠವಾದ ರಸಮಯ ವಸ್ತುವಿಶೇಷ. ನಾಟ್ಯಕ್ಕೂ ಅದಕ್ಕೆ ಸಂಬಂಧಿಸಿದ ಕಥೆಗಳಿಗೂ ಭಂಡಾರ. ವಾಲ್ಮೀಕಿ, ಕಾಳಿದಾಸ, ಶೂದ್ರಕ ಮುಂತಾದವರೆಲ್ಲರೂ ತಮ್ಮ ಕಾವ್ಯಗಳಲ್ಲಿ ಮಯೂರವನ್ನು ಹೇಳಿದ್ದಾರೆ. ಉದಯನು ಮಯೂರಸಂದೇಶವೆಂಬ ಹಾಗೂ ಮುನಿಧುರಂಧರನು ಮಯೂರದೂತವೆಂಬ ಕಾವ್ಯಗಳನ್ನೇ ರಚಿಸಿರುವುದು ವಿಶೇಷ. ಸಿಂಹಳೀಯ ಭಾಷೆಯಲ್ಲಿಯೂ ಮಹಾವಿದ್ವಾಂಸನಾಗಿದ್ದ ಗುರುಲುಗೊಮಿಯ ಮೊಮ್ಮಗ ಕವೀಶ್ವರನೆಂಬುವವನು ಕಾಳಿದಾಸನ ಹಂಸಸಂದೇಶ ಕಾವ್ಯದಿಂದಲೇ ಸ್ಫೂರ್ತಿಗೊಂಡು ಮಿಯೂರಸಿಂದೇಸವೆಂಬ ದೂತಕಾವ್ಯವನ್ನು ರಚಿಸಿದ್ದಾನೆ. ಮಿಯೂರಸಿಂದೇಸವು ನಂತರದ ಕಾಲದಲ್ಲಿ ಸಂಸ್ಕೃತೀಕರಣಗೊಂಡು ಮಯೂರ ಸಂದೇಶವೆಂದಾಯಿತೆಂದು ವಿದ್ವಾಂಸರು ಹೇಳುತ್ತಾರೆ.

ಉದಯಕವಿಯು 15ನೆಯ ಶತಮಾನದವನು. ಕಾಳಿದಾಸನ ಮೇಘದೂತ ಕಾವ್ಯದಿಂದ ಸ್ಫೂರ್ತಿಪಡೆದು ಮಯೂರ ಸಂದೇಶವನ್ನು ರಚಿಸಿದವನು. ಈ ಕಾವ್ಯವು ಪೂರ್ವ ಹಾಗೂ ಉತ್ತರ ಭಾಗಗಳಾಗಿ ವಿಂಗಡನೆಯಾಗಿದ್ದು 107 ಮತ್ತು 92 ಶ್ಲೋಕಗಳನ್ನು ಹೊಂದಿದೆ. ಪ್ರಥಮ ಶ್ಲೋಕವು ಮಾಲಿನೀ ವೃತ್ತದಲ್ಲಿದ್ದು ಗಣೇಶ

ಸ್ತುತಿಯಂತಾಗಿದೆ. ಉಳಿದವೆಲ್ಲ ಮಂದಾಕ್ರಾಂತ ವೃತ್ತದಲ್ಲಿ ರಚಿಸಲ್ಪಟ್ಟಿವೆ. ಕಾವ್ಯವಸ್ತುವು ಹೀಗಿದೆ : ನಾಯಕನು ವಿದ್ಯಾಧರನಿಂದ ಅಪಹರಿಸಲ್ಪಟ್ಟ ತನ್ನ ಪ್ರಿಯತಮೆಗೆ ಮಯೂರದ ಮೂಲಕವಾಗಿ ಸಂದೇಶವನ್ನು ಕಳುಹಿಸಿದ್ದು. ಮಲಬಾರಿನ(ಈ ರೀತಿಯ ನಾಮವೂ ಈಗ ಬದಲಾಗಿದೆ) ರಾಜನ ಸಂಬಂಧಿಕ ರಾಜನೊಬ್ಬನು ತನ್ನ ರಾಣಿಯೊಂದಿಗೆ ಪಯಣಿಸುತ್ತಿದ್ದಾಗ ವಿದ್ಯಾಧರನೊಬ್ಬನು ಆತನನ್ನು ನೋಡಿ ಸಾಕ್ಷಾತ್ ಶಿವನೆಂದೇ ಭ್ರಮಿಸಿಬಿಟ್ಟನು. ಇದನ್ನು ನೋಡಿ ರಾಜಸಂಬಂಧಿಯು ನಕ್ಕುಬಿಟ್ಟಿದ್ದರಿಂದ ಕೋಪಗೊಂಡ ವಿದ್ಯಾಧರನು ಈ ರಾಜಸಂಬಂಧಿಯು ತನ್ನ ಪತ್ನಿಯಿಂದ ಒಂದು ತಿಂಗಳ ಕಾಲ ಅಗಲಿಕೆಯಿಂದಿರಲಿ ಎಂದು ಶಪಿಸಿದನು. ರಾಜನು ವಿದ್ಯಾಧರನ ಕ್ಷಮೆಯನ್ನೂ, ಕರುಣೆಯನ್ನೂ ಬಹುವಾಗಿ ಬೇಡಿದ್ದರಿಂದ ವಿದ್ಯಾಧರನು ಆತನನ್ನು ಕೇರಳದ ಶ್ಯಾನಂದೂರದಲ್ಲಿಯೆ ನೆಲೆಸಲು ಒಪ್ಪಿಗೆಯನ್ನು ನೀಡಿದನು. ರಾಜನು ವಿರಹವನ್ನು ತಡೆಯಲಾರದೆ ತನ್ನ ಸಂದೇಶವನ್ನು ಮಯೂರದ ಮೂಲಕ ಕಳುಹಿಸಲು ನಿರ್ಧರಿಸಿದನು. ಈ ಕಾವ್ಯವು ಬಹಳ ಭಾವನಾತ್ಮಕವಾಗಿದ್ದು ಕಾವ್ಯರಚನೆಯ ಸಮಯದಲ್ಲಿದ್ದ ಕೇರಳದ ರಾಜಕೀಯ ಹಾಗೂ ಭೌಗೋಳಿಕ ಸ್ಥಿತಿ – ಗತಿಗಳನ್ನು ಕುರಿತಾದ ಮಾಹಿತಿಗಳನ್ನು ನೀಡುತ್ತದೆಂದು ಸಂಶೋಧಕರು ಹೇಳುತ್ತಾರೆ. ಭಾರತವು ಮಾತ್ರವಲ್ಲದೆ ಪ್ರಾಚೀನ ಗ್ರೀಕ್, ರೋಮ್, ಈಜಿಪ್ಟ್‌ಗಳ ಸಾಹಿತ್ಯಗಳಲ್ಲಿಯೂ ಮಯೂರವನ್ನು ಕುರಿತಾದ ಸಾಕಷ್ಟು ಉಲ್ಲೇಖಗಳಿವೆ.

ಮಯೂರವನ್ನು ಕುರಿತಾದ ದೈವಿಕ ನಂಬುಗೆಗಳು–

ಭಾರತದಲ್ಲಿ ನವಿಲು ರಾಷ್ಟ್ರಪಕ್ಷಿ.ಮಯೂರವು ವರ್ಣರಂಜಿತವಾದ ಅತ್ಯಂತ ಸುಂದರವಾದ ಪಕ್ಷಿಯಾಗಿದ್ದು, ಅವು ಸಮೃದ್ಧಿ, ಸಂತಾನಕಾರಕ, ದೀರ್ಘಾಯು, ಪ್ರೀತಿಗಳ ದ್ಯೋತಕವಾಗಿದೆ. ಅವುಗಳ ಗರಿಗೆದರಿ ಕುಣಿಯುವಿಕೆಯು ಆತ್ಮಪ್ರತ್ಯಯದ, ಹೆಮ್ಮೆಯ, ಗರ್ವದ ದ್ಯೋತಕವೂ ಆಗಿದ್ದು, ಯಾವುದೇ ಶುಭಕರ ಕಾರ್ಯಗಳಲ್ಲಿ ಅವು ಶುಭಶಕುನವೆಂಬ ನಂಬಿಕೆಗಳು ಅನೇಕ ಧರ್ಮ – ಮತಗಳಲ್ಲಿಯೂ ಪರಿಗಣಿಸಲ್ಪಟ್ಟಿದೆ. ಆದ್ದರಿಂದಲೇ ದೇವಾಲಯಗಳಲ್ಲಿ, ರಾಜವನಗಳಲ್ಲಿ ಅವುಗಳ ಚಿತ್ರ ಹಾಗೂ ಶಿಲ್ಪಗಳು ಇರುತ್ತವೆ.

ನವಿಲು ಪುರಾಣಪ್ರಸಿದ್ಧವಾದದ್ದು.

ISSN No : 2321-2519

ವಿದ್ಯಾಧಿದೇವತೆಯಾದ ಸರಸ್ವತಿಯ ವಾಹನ. ಋಗ್ವೇದ, ರಾಮಾಯಣ, ಮಹಾಭಾರತಗಳಲ್ಲಿಯೂ ಈ ಪಕ್ಷಿಯ ಉಲ್ಲೇಖಗಳಿವೆ. ಯುದ್ಧದೇವತೆ ಕಾರ್ತಿಕೇಯನು ಶೂರಪದ್ಮನೊಂದಿಗೆ ಯುದ್ಧವನ್ನು ಮಾಡುವಾಗ ಮಾಯಾವಿಯಾದ ಈ ರಕ್ಕಸನು ಒಂದು ಮಾವಿನಮರವಾದನಂತೆ! ಮುರುಗನು ತನ್ನ ವೇಲಾಯುಧದಲ್ಲಿ ಮರವನ್ನು ಸೀಳಿದಾಗ ಒಂದು ಭಾಗವು ಕುಕ್ಕುಟವೂ ಇನ್ನೊಂದು ಭಾಗವು ಮಯೂರವೂ ಆಯಿತಂತೆ ! ಸ್ಕಂದನು ಕುಕ್ಕುಟವನ್ನು ತನ್ನ ಧ್ವಜವನ್ನಾಗಿಯೂ ಮಯೂರವನ್ನು ತನ್ನ ವಾಹನವನ್ನಾಗಿಯೂ ಮಾಡಿಕೊಂಡನೆಂದೂ, ಈ ಮಯೂರದ ಹೆಸರು 'ಪರವಣಿ'ಯೆಂದೂ ಉಪಾಖ್ಯಾನ. ಹಾಗೆಂದೇ ಮುರುಗ ಭಕ್ತರು ಪಳನಿ ಯಾತ್ರೆಯ ತಮ್ಮ ಕಾವಡಿ ಹೊರುವ ಸೇವೆಯಲ್ಲಿ ಕಾವಡಿಯನ್ನು ನವಿಲುಗರಿಗಳಿಂದ ಸಿಂಗರಿಸುತ್ತಾರೆ.

ದೇವರಾಜನಾದ ಇಂದ್ರನಿಗೆ ನವಿಲಿನಂತೆ ಮೈಯೆಲ್ಲ ಕಣ್ಣುಗಳಿದ್ದು ನವಿಲಿನ ರೂಪವನ್ನು ಧರಿಸುತ್ತಾನೆ – ಎಂಬಿವೇ ನಂಬಿಕೆಗಳು ಭಾರತದಲ್ಲಿವೆ ! ಅಲ್ಲದೆ, ಇಂದ್ರನು ಲಂಕೆಯ ಒಡೆಯನಾದ ರಾವಣನೊಂದಿಗೆ ಯುದ್ಧವನ್ನು ಮಾಡುವ ಸಮಯದಲ್ಲಿ ಆತನಿಗೆ ಅಪಾಯ ಉಂಟಾಗುವ ಸಮಯದಲ್ಲೆಲ್ಲ ಮಯೂರವು ತನ್ನ ರೆಕ್ಕೆಬಿಚ್ಚಿ, ಅಡ್ಡಗಟ್ಟಿ ರಕ್ಷಿಸುತ್ತಿತ್ತಂತೆ! ಇದರಿಂದ ಸಂತಸಗೊಂಡ ಇಂದ್ರನು ನವಿಲಿನ ರೆಕ್ಕೆಗಳಿಗೆ ಆಕರ್ಷಕವಾದ ಬಣ್ಣಗಳನ್ನು ನೀಡಿ ಅಲಂಕರಿಸಿದನಂತೆ. ಮಳೆಯ ಮೇಘಗಳಿಗೆ ದೊರೆಯು ಇಂದ್ರನೇ ತಾನೇ! ಮಳೆಯ ಮೇಘಗಳು ಆಗಸದಲ್ಲಿ ನೆರೆದರೆ ತಮ್ಮ ಇಂದ್ರನೇ ಬಂದನೆಂಬ ಹರ್ಷದಿಂದ ಮಯೂರಗಳು ನರ್ತಿಸುತ್ತವಂತೆ! ಸಮುದ್ರಮಂಥನದ ಕಾಲದಲ್ಲಿಯೂ ಮಯೂರವು ಮಥನಕಾಲದಲ್ಲಿ ಉಂಟಾದ ಋಣಾತ್ಮಕ ಅಂಶಗಳನ್ನೆಲ್ಲ ಹೀರಿಕೊಂಡು ನುಂಗಿಬಿಟ್ಟಿತೆಂದು ಜನಪದರ ನಂಬಿಕೆ. ಇಂತಹ ಕಥೆಗಳಿಂದಲೂ ಸರ್ಪವೈರಿಯಾದ್ದರಿಂದಲೂ ನವಿಲು ಶುಭವೆಂದೂ, ಕೃಷಿಕನ ಸ್ನೇಹಿತನೆಂದು ಜನಪದರರು ನಂಬುತ್ತಾರೆ. ಅದರ ರೆಕ್ಕೆ ಪುಕ್ಕಗಳನ್ನು ಮಂತ್ರಿಸಿ ಮೈ ಕೈಕಾಲುಗಳಿಗೆ ಕಟ್ಟಿದರೆ ನೋವುಗಳು ಗುಣವಾಗುತ್ತದೆಂದೂ ಇತ್ಯಾದಿ ನಂಬಿಕೆಗಳು ಕೃಷಿಕರಾದ ಹಳ್ಳಿಗರಿಗೂ, ಆದಿವಾಸಿಗಳಿಗೂ

ಇವೆ. ಬ್ರಿಟಿಷರು ಭಾರತವನ್ನು ಆಳುತ್ತಿದ್ದ ಸಮಯದಲ್ಲಿ ಅವರ ಸಿಪಾಯಿಗಳು ಜನಪದಕ್ಕೆ ನವಿಲಿನೊಂದಿಗಿನ ಇರುವ ಭಾವನಾತ್ಮಕ ಸಂಬಂಧಗಳು ತಿಳಿಯದೆ ಗುಂಡು ಹಾರಿಸಿ ಹತ್ಯೆಯನ್ನು ಮಾಡಿದಾಗ ಅನೇಕ ಘರ್ಷಣೆಗಳು ಹಳ್ಳಿಗರ ಮತ್ತು ಈ ಸಿಪಾಯಿಗಳ ಮಧ್ಯೆ ಸಂಭವಿಸುತ್ತಿದ್ದವು.

ಮಹಾಮಾಯೂರೀ ವಿದ್ಯಾರಾಜ್ಞೀ ಎಂಬ ದೇವತೆಯು ಬೌದ್ಧರ ಮಹಾಯಾನದ ದೇವತೆಯಾಗಿದ್ದು ಜಪಾನಿನಲ್ಲಿ ಈ ದೇವತೆಯನ್ನು ಕುಜಕು ಮ್ಯೋ-ಓ ಎನ್ನುತ್ತಾರೆ. ಈ ದೇವತೆಯು ವಿಷಹಾರಿಣಿಯೆಂಬ ನಂಬುಗೆ ಇದೆ. ನೇಪಾಳದಲ್ಲಿ ಈ ದೇವತೆಯು ವಿದ್ಯೆಗೆ ರಾಜದೇವತೆಯಾಗಿದ್ದು ಪಂಚರಕ್ಷಾದೇವಿಯಲ್ಲೊಬ್ಬಳಾಗಿದ್ದಾಳೆ.

ಇಸ್ಲಾಂ ಧರ್ಮದ ಒಂದು ದಂತಕಥೆಯಲ್ಲಿ ನವಿಲು ಸ್ವರ್ಗದ ಬಾಗಿಲೂ ಆಗಿದೆ! ನೂರಾರು ಕಣ್ಣುಗಳಿರುವ ಪಕ್ಷಿಯೆಂದೇ ಹೆಸರಾದ ಮಯೂರದ ಕಣ್ಣುಗಳು ವಿಶ್ವದ ಸೂರ್ಯ – ಚಂದ್ರ – ತಾರೆಗಳನ್ನು ಪ್ರತಿನಿಧಿಸುತ್ತವೆಂದೂ, ಅದರ ಮಾಂಸಲವು ಕೊಳೆಯದೆ ಅಮರತ್ವವನ್ನು ಪ್ರತಿಪಾದಿಸುತ್ತದೆಂದೂ, ಎಲ್ಲವನ್ನೂ ನೋಡಿ ಗಮನಿಸುವಂತಹ ಚರ್ಚ್ ಅದೆಂದೂ, ಕ್ರೈಸ್ತರು ನಂಬುತ್ತಾರೆ! ಗ್ರೀಕ್ ಮತ್ತು ರೋಮನ್ ಪುರಾಣ ದಂತಕಥೆಗಳಲ್ಲಿ ನವಿಲು ದೇವಮುಖ್ಯಸ್ಥರಾದ ಹೀರಾ ಹಾಗೂ ಜ್ಯೂನೋಗಳ ಪ್ರಿಯ ಪಕ್ಷಿಯಾಗಿದ್ದು, ಹೀರಾಳು ಅವಳ ನೂರು ಕಣ್ಣುಗಳುಳ್ಳ ಅಂಗರಕ್ಷಕನಾದ ಆರ್ಗಸ್‌ನ ಕಣ್ಣುಗಳಿಂದ ಮಯೂರವನ್ನು ಸೃಷ್ಟಿಸಿದಳೆಂಬ ದಂತಕಥೆಯಿದೆ. ನವಿಲು ವರ್ಷಕಾಲದಲ್ಲಿ ನರ್ತಿಸುತ್ತದೆಂದೂ ನಂಬಿಕೆಯಿದ್ದ ಕಾರಣ ಒಂದು ಕಾಲದಲ್ಲಿ ಭೂಮಿ, ಸ್ತ್ರೀಯರು ಮತ್ತು ಪ್ರಾಣಿಗಳ ಫಲವತ್ತತೆಗಾಗಿ ನವಿಲುಗಳನ್ನು ಬಲಿಕೊಡಲಾಗುತ್ತಿತ್ತು. ಪ್ರಾಚೀನ ಚೀನಾದಲ್ಲಿ ಮಯೂರದ ಒಂದು ದೃಷ್ಟಿಯು ಸ್ತ್ರೀಯನ್ನು ಗರ್ಭವತಿಯಾಗಿಸುತ್ತದೆಂಬ ನಂಬುಗೆಯಿದ್ದಿತು! ನವಿಲು ಚೀನಾದವರಿಗೆ ಪವಿತ್ರ ಪಕ್ಷಿ. ಬೌದ್ಧರಿಗೂ ಮಯೂರವು ಪವಿತ್ರತೆಯನ್ನು ಬಿಂಬಿಸುವ ಪಕ್ಷಿಯಾಗಿದ್ದು ಶುದ್ಧೀಕರಿಸುವ ಪವಿತ್ರಕ್ರಿಯೆಗಳಿಗೆ ನವಿಲುಗರಿಗಳನ್ನು ಬಳಸುತ್ತಾರೆ. ಇಸ್ಲಾಂ ಧರ್ಮದಲ್ಲಿಯೂ ಇದೇ ಪದ್ಧತಿಯನ್ನು ಅನ್ವಯಿಸಿಕೊಂಡಿದ್ದಾರೆ. ಆದರೆ ಇವೆಲ್ಲ



 ISSN No : 2321-2519

ನಂಬಿಕೆಗಳಿಗೂ ವಿರುದ್ಧವಾಗಿ ಯೂರೋಪ್ ಖಂಡದಲ್ಲಿ ನವಿಲಿನ ಕೂಗು, ಅವುಗಳ ರೆಕ್ಕೆ ಪುಕ್ಕಗಳನ್ನು ಬಹಳ ಅಶುಭಕಾರಕ ಶಕುನವಾಗಿ ಪರಿಗಣಿಸಲ್ಪಡುತ್ತದೆ!

ಭಾರತದಲ್ಲಿ ಮಯೂರನೃತ್ಯ

ಮುಂಗಾರಿನ ಮಳೆಯ ಆಗಮನದ ಸಮಯದಲ್ಲಿ ಅಮೃತವರ್ಷದಿಂದ ಭೂಮಿತಾಯಿಯು ಹಸಿರುಡುಗೆಯನ್ನುಟ್ಟಾಗ, ಈ ಸಂತಸದ ಸಮಯದಲ್ಲಿ ನವಿಲು ನರ್ತಿಸುವಂತಹುದಾಗಿದ್ದು, ಮಯೂರನೃತ್ಯವು ವರ್ಷಕಾಲದ ಸಮೃದ್ಧಿಯ ದ್ಯೋತಕವಾಗಿದೆ. ಅಲ್ಲದೆ ಇದು ರಾಧಾ – ಮಾಧವರ ಪ್ರೇಮದ ದ್ಯೋತಕವೂ ಆಗಿದ್ದು ಕೃಷ್ಣನು ತನ್ನ ಪ್ರಿಯತಮೆಯಾದ ರಾಧೆಯನ್ನು ಸಂತೋಷಗೊಳಿಸುವ ಸಲುವಾಗಿ ತಾನೇ ಮಯೂರವಾಗಿ ಮಾರ್ಪಟ್ಟು ನರ್ತಿಸುತ್ತಾನೆಂದು ನಂಬಿಕೆಯಿದೆ ! ರಾಧೆಯೂ ಕೃಷ್ಣನೊಂದಿಗೆ ಸಂತೋಷದಿಂದ ಈ ನೃತ್ಯದಲ್ಲಿ ಪಾಲ್ಗೊಳ್ಳುತ್ತಾಳೆ! ಶ್ರೀಕೃಷ್ಣನ ಜನ್ಮಸ್ಥಳವಾದ ಮಥುರಾ ಹಾಗೂ ಆಸುಪಾಸಿನಲ್ಲಿ ನರ್ತಕ – ನರ್ತಕಿಯರು ಪೂರ್ಣವಾಗಿ, ನವಿಲಿನ ಗರಿಗಳನ್ನು ಅಲಂಕರಿಸಿ, ನವಿಲಿನಂತೆ ವೇಷ ಧರಿಸುತ್ತಾರೆ. ಈ ನೃತ್ಯವು ತಲೆಯ ಕೊಂಕು, ಕೈಕಾಲುಗಳ ಲಾಲಿತ್ಯಪೂರ್ಣ ಚಲನೆಗಳಿಂದಲೂ, ಬಹಳ ಒನಪು ಒಯ್ಯಾರಗಳಿಂದಲೂ ಕೂಡಿದ್ದು, ನೋಡಲು ಬಹಳ ಸುಂದರವಾಗಿರುತ್ತದೆ. ಉತ್ತರಪ್ರದೇಶದ ಮಯೂರನೃತ್ಯವು ಕೃಷ್ಣನ ಆರಾಧನೆಯ ಸಮಯದಲ್ಲಿ ನಡೆಯುವಂತಹುದು. ಇದನ್ನು ನರ್ತಿಸುವ ಕಲಾವಿದರು ನವಿಲಿನ ಗರಿಗಳನ್ನು ತಲೆಯ ಮೇಲೆ ಪುಟ್ಟದಾಗಿಯೂ ಹಾಗೂ ಬೆನ್ನ ಹಿಂದೆ ಅಗಲವಾಗಿಯೂ ಹೆಣೆದು ಅಲಂಕಾರವಾಗಿ ಧರಿಸುತ್ತಾರೆ. ರಾಸಲೀಲಾ ನೃತ್ಯ ಸಂದರ್ಭದಲ್ಲಿ ನರ್ತಿಸುವ ಈ ನೃತ್ಯವು, ಕೃಷ್ಣನ ಮೇಲಣ ರಾಧೆಯ ಪ್ರೇಮವನ್ನು ಕುರಿತಾಗಿದ್ದು, ಕಥಾ ಸಂದರ್ಭವು ರಾಧೆಯು ಮಯೂರನೃತ್ಯವನ್ನು ನೋಡಲು ಆಶಿಸಿದ್ದಾಗಿಯೂ ಭಗವಂತನು

ತಾನೇ ನವಿಲಿನಂತೆ ರಾಧೆಯೆದುರು ನರ್ತಿಸಿದನೆಂದೂ ಇದೆ.

ಕೇರಳ ಮತ್ತು ತಮಿಳುನಾಡುಗಳಲ್ಲಿ ಮಯಿಲಾಟ್ಟಂ (=ಮಯೂರನಾಟ್ಯವು) ಕೃಷಿಗೆ ಪ್ರಮುಖವಾದ ಪೊಂಗಲ್ (ಸುಗ್ಗಿಯ) ಸಮಯದಲ್ಲಿ ನರ್ತಿಸಲ್ಪಡುತ್ತದೆ. ಮಾತ್ರವಲ್ಲದೆ ಎಲ್ಲ ಮುರುಗನ್ (ಸುಬ್ರಹ್ಮಣ್ಯ) ದೇವಸ್ಥಾನಗಳಲ್ಲಿಯೂ ದೇವರ ಹರಕೆಯ ಸೇವೆಗಾಗಿ ಮಯೂರನೃತ್ಯವು ನರ್ತಿಸಲ್ಪಡುತ್ತದೆ. ಇದು ಉತ್ತರಪ್ರದೇಶದ ಮಯೂರನೃತ್ಯವನ್ನು ಹೋಲುವಂತಹುದಾಗಿದ್ದು ಯುವತಿಯರು ನವಿಲನ್ನು ಅಡಿಯಿಂದ ಮುಡಿಯವರೆಗೂ ಹೋಲುವ ವಸ್ತ್ರಗಳನ್ನು ಧರಿಸಿ ಲಯವಾದ್ಯಗಳ ವಾದನಕ್ಕೆ ತಕ್ಕಂತೆ ಮಯೂರದ ನಡಿಗೆಯನ್ನು, ಕುಣಿತವನ್ನು ಅನುಕರಿಸುವ ಆಂಗಿಕವನ್ನು ಪ್ರಯೋಗಿಸುತ್ತಾರೆ. ಕೆಲವು ಮಯೂರನೃತ್ಯಗಳಿಗೆ ಕೃತಕ ಮಯೂರ ತಲೆಗಳನ್ನು ಧರಿಸಿಕೊಂಡು, ಮಯೂರದ ಬಾಯಿಯನ್ನು ತೆರೆಯಲು ಬೇಕೆಂದಾಗ ಈ ತಲೆಯ ಒಳಗಿನಿಂದ ಕೈಗಳ ಮೂಲಕವಾಗಿ ತೆರೆದು ಮುಚ್ಚಲು ಅನುಕೂಲಿಸುವಂತೆ ದಾರಗಳನ್ನು ಕಟ್ಟಿರುತ್ತಾರೆ. ಇನ್ನು ಕೆಲವು ಮಯೂರನೃತ್ಯಗಳಿಗೆ ಕಲಾವಿದರು ಮರದ ಕಾಲುಗಳನ್ನು ಕಟ್ಟಿ ಕುಣಿಯುತ್ತಾರೆ! ಇದಕ್ಕೆ ಅತಿಯಾದ ಶ್ರಮವುಳ್ಳ ಅಭ್ಯಾಸ, ಸಾಧನೆಗಳೂ, ಸರಿಯಾದ ಶಿಕ್ಷಣವೂ ಬೇಕಾಗುತ್ತದೆ. ಆದರೆ ಸಾಧನೆ, ಅಭ್ಯಾಸಗಳನ್ನು ಮಾಡುವುದು ಕಠಿಣತಮವಾದದ್ದರಿಂದಲೂ ಅಪಾಯಕರವಾದದ್ದರಿಂದಲೂ, ಶ್ರಮಕ್ಕೆ ತಕ್ಕಂತಹ ಆರ್ಥಿಕ ನೆರವು, ಪ್ರೋತ್ಸಾಹಗಳು ದೊರೆಯದ್ದರಿಂದಲೂ ಕಲಾವಿದರಿಗೆ ಇದನ್ನು ಉಳಿಸಿಕೊಳ್ಳುವುದು ಶ್ರಮಸಾಧ್ಯವಾಗಿ ಇಂತಹ ವಿದ್ಯೆಗಳು ಈಗ ಅಳಿವಿನ ಹಾದಿಯನ್ನು ಹಿಡಿಯುತ್ತ, ಮಾಯವಾಗುತ್ತ ಬಂದಿವೆ.

ಕೇರಳದಲ್ಲಿ ಭಗವತಿಯಾಟವು (ಭೂತಾರಾಧನೆ) ಅನೇಕ ವಿಧಿಯಾಚರಣೆಗಳೊಂದಿಗೆ ನಡೆಯುವುದು. ಬೆಳಗ್ಗಿನ ಪೂಜೆ,

 ISSN No : 2321-2519

ಮಧ್ಯಾಹ್ನ ಪೂಜೆ, ಆಟ್ಟಂ ಉಣರ್ತಲ್, ತೋಟ್ಟಂ, ತಾಲಟ್ಟಲಿ, ಮೆರವಣಿಗೆ, ವೆಳಿಚ್ಚಪಾಡ್, ಕೋಲ, ಕ್ಷೇತ್ರಪಾಲಕನ ಕೋಲ, ಗುರುದಿ, ಕೋಳಿಬಲಿ, ವೆಳಿಚ್ಚ ಪಾಡನ ನುಡಿಗಟ್ಟು, ಮುಡಿಯಾಟಂ, ಆಟ್‌ಕೂಡಲ್ ಎಂಬ ಕ್ರಮದಲ್ಲಿ ಆಚರಣೆಗಳು ನಡೆಯುತ್ತವೆ. ಭಗವತಿ ಕೋಲದ ಮುಂಚಿತವಾಗಿ ಕೆಲವೆಡೆಗಳಲ್ಲಿ ಮನರಂಜನೆಯ ಅಂಗವಾಗಿ ಪೊರಾಟ್ ನಡೆಸುವ ಕ್ರಮವಿದೆ. ಭಗವತಿ ಕೋಲವನ್ನು ನರ್ತಿಸುವಾಗ ಧರಿಸುವ ತಲೆಮುಡಿ (ತಲೆಪಟ್ಟ) ಯ ಹಿಂಭಾಗದಲ್ಲಿ ನವಿಲುಗರಿಯನ್ನು ಅಳವಡಿಸಿ ಅಲಂಕರಿಸಿರುತ್ತಾರೆ. ಆದುದರಿಂದ ಈ ತಲೆಮುಡಿಯಾಟವು ಮಯಿಲಾಟ (ನವಿಲಾಟ)ವನ್ನು ಹೋಲುವುದು.

ಕರ್ಮನಾಚ್ ಎಂಬ ನಾಟ್ಯವು ಒರಿಸ್ಸಾದೇಶದಾಗಿದ್ದು, ಕೃಷಿಕರಾದ ಸಂಥಾಲ್ ಮರಿಯ ಜನರು ಅವರ ಕರ್ಮದೇವತಾ ಹಾಗೂ ಕರಮ್‌ಸಾನಿ ದೇವತೆಗಳ(ಕರ್ಮಕ್ಕೆ ಸಂಬಂಧಿಸಿದ ದೇವ – ದೇವಿಯರು; ಕರ್ಮ, ಎಂದರೆ ಅದೃಷ್ಟಕ್ಕೆ ಕಾರಕರೆಂದು ನಂಬಿ) ಪ್ರೀತ್ಯರ್ಥವಾಗಿ ನರ್ತಿಸುತ್ತಾರೆ. ಅದು ಭಾದ್ರಪದದ ಶುಕ್ಲಪಕ್ಷದ ಏಕಾದಶಿಗೆ ಆರಂಭವಾಗಿ ಬಹಳ ದಿನಗಳು ಉತ್ಸವವು ನಡೆಯುತ್ತದೆ. ಈ ಉತ್ಸವವನ್ನು ಕಲಹಂಡೀ, ಸುಂದರ್ ಘರ್, ಸಂಭಾಲ್ ಪುರ್, ಮಯೂರ್‌ಭಂಜ್ ಪ್ರದೇಶಗಳಲ್ಲಿರುವ ಕೃಷಿಕರಾದ ಬಿಂಝುಲ್, ಖಾರಿಯಾ, ಕಿಸಾನ್ ಮತ್ತು ಪೋಲ್ ಮುಂತಾದ ಜನಾಂಗದವರು ಮುಖ್ಯವಾಗಿ ಆಚರಿಸುತ್ತಾರೆ. ಕರ್ಮಾನಾಚ್ ಮುಖ್ಯವಾಗಿ ಒಳ್ಳೆಯ ಬೆಳೆ ಹಾಗೂ ಮಕ್ಕಳನ್ನು ದಯಪಾಲಿಸುವ ಕರಮ್ ಸಾನಿ ದೇವತೆಯ ಪ್ರೀತ್ಯರ್ಥವಾಗಿದ್ದು ಪೂಜಾವಿಧಿಗಳು ನಡೆದ ನಂತರ ದೊಡ್ಡತಾಳ (ಝುಲ್ಲರೀ), ಮಾಂಡಲ್ (ದೊಡ್ಡ ಡೋಲಿನಂತಹ ವಾದ್ಯ) ಮುಂತಾದ ವಾದ್ಯವಾದನಗಳೊಂದಿಗೆ ಗೀತಗಳನ್ನು ಹಾಡುತ್ತ ನರ್ತಿಸುತ್ತಾರೆ. ಕೆಂಪು ಬಣ್ಣದ ಅಂಗಿಗಳ ಮೇಲೆ ವರ್ಣರಂಜಿತವಾದ ನವಿಲಿನ ರೆಕ್ಕೆ – ಪುಕ್ಕಗಳನ್ನು ಬಹಳವಾಗಿ ಅಲಂಕರಿಸಿ, ಸಣ್ಣ ಸಣ್ಣ ಕವಡೆ, ಶಂಖ, ಕಪ್ಪೆಚಿಪ್ಪು ಮುಂತಾದವುಗಳಿಂದ ಮಾಡಲ್ಪಟ್ಟ ಆಭರಣಗಳನ್ನು ಧರಿಸಿ ಸ್ತ್ರೀ – ಪುರುಷ – ಮಕ್ಕಳಾದಿಯಾಗಿ ರಾತ್ರಿಯಿಡೀ ಡೋಲಿನ ಪ್ರೈಮರೆಸುವಂತಹ ಶಬ್ದಕ್ಕೆ ಸರಿಯಾಗಿ, ಶಕ್ತಿಯುತವಾಗಿ, ಕುಣಿಯುತ್ತಾರೆ. ಹಾಡುಗಳು ಕರಮ್‌ಸಾನಿಯನ್ನು ಕುರಿತಾದ

ಭಕ್ತಿಗೀತೆಗಳೂ, ಪ್ರಕೃತಿಯ ವರ್ಣನೆ – ಹೊಗಳಿಕೆ, ಸ್ನೇಹ – ಪ್ರೀತಿ – ಹಾಸ್ಯ ಮುಂತಾದ ಭಾವಗಳಿರುವ ಸಾಹಿತ್ಯಗಳಿಂದ ಕೂಡಿರುತ್ತವೆ. ಒರಿಸ್ಸಾದ ಮಯೂರಭಂಜ್ ಪ್ರಾಂತ್ಯದ ಚ್ಛಾವ್ ನೃತ್ಯದ ಅಂಗವಾದ ಮಯೂರ ಜನಪದ ನೃತ್ಯವು, ಬಿಸಿಲಿನ ಬೇಗೆಯಲ್ಲಿ ಬೆಂದು ಬಸವಳಿದು ಕಾದಿದ್ದ ಮಯೂರವು ವರ್ಷಾಗಮನಕ್ಕೆ ಸಂತಸಪಟ್ಟು ಜೀವೋಲ್ಲಾಸಕಾರಕವಾದ ಶುಭ್ರ ವಾಯುಸಂಚಾರ ಮತ್ತು ಜಲದ ನವಾಗಮನದ ಕುರುಹಾಗಿ ಕುಣಿಯುವಂತಿರುತ್ತದೆ. ಚ್ಛಾವ್ ನೃತ್ಯದ ಪ್ರಮುಖ ಅಂಗವೇ ಆದ ಮುಖವಾಡಗಳನ್ನು ಈ ಮಯೂರನೃತ್ಯಕ್ಕೆ ಉಪಯೋಗಿಸುವುದಿಲ್ಲ.

ಛತ್ತೀಸಗಢದ ಮಯೂರನೃತ್ಯವು ಆದಿವಾಸಿಗಳು ನರ್ತಿಸುವಂತಹುದಾಗಿದ್ದು, ಪುರುಷರು ನವಿಲ್ಗರಿಗಳನ್ನು (plumes) ಅಲಂಕರಿಸಿದ ತಲೆಯ ಪಾಗನ್ನೂ, ವರ್ಣರಂಜಿತವಾದ ವಸ್ತ್ರಗಳನ್ನೂ ಧರಿಸುತ್ತಾರೆ. ಸ್ತ್ರೀಯರು ಹಚ್ಚೆಗಳನ್ನು ಹಾಕಿಸಿಕೊಂಡಿದ್ದು, ಹಿತ್ತಾಳೆಯ ಸುಂದರವಾದ ತಲೆಗಟ್ಟುಗಳನ್ನೂ , ಮಣಿಗಳಿಂದ ಪೋಣಿಸಲ್ಪಟ್ಟ ಕಂಠಾಭರಣಗಳನ್ನೂ ಧರಿಸುತ್ತಾರೆ.

ಉತ್ತರಾಖಂಡದ ಪಶ್ಚಿಮದಲ್ಲಿರುವ ಗಢ್ವಾಲ್ ಹಿಮಾಲಯದ ತಪ್ಪಲಿನಲ್ಲಿದೆ. ಗಢ್ವಾಲ್‌ದ (=ಗರ್ಹ್ವಾಲ್) ಜನಪದರಲ್ಲಿ ನವಿಲಿಗೆ ಸಂಬಂಧಿಸಿದಂತೆ ಗೀತ–ನೃತ್ಯಗಳಿರುವುದು ಸರ್ವೇಸಾಧಾರಣವಾಗಿದ್ದು, ಎಲ್ಲ ರೀತಿಯ ಜನಸಮುದಾಯಗಳಲ್ಲಿಯೂ ಮಯೂರನೃತ್ಯವು (=ಮೋರ್ ನಾಚೊರ್) ವಸಂತಮಾಸದಲ್ಲಿ ನರ್ತಿಸಲ್ಪಡುತ್ತದೆ. ಇದಕ್ಕೂ ಅಲ್ಲಿನ ಚಾವುನ್‌ಫುಲ ನೃತ್ಯಕ್ಕೂ ಬಹಳಷ್ಟು ಹೋಲಿಕೆಗಳಿದ್ದರೂ ಮಯೂರ ನರ್ತನವು ಹೆಚ್ಚು ಮುಕ್ತವಾದ ಅನಿರ್ಬಂಧಿತ ನೃತ್ಯಶೈಲಿಯಾದದ್ದರಿಂದ ಜನರಿಗೆ ಹೆಚ್ಚು ಪ್ರಿಯವಾಗಿದೆ. ಸಂಶೋಧಕರಾದ ಡಾ. ನೌಟಿಯಾಲರು ಗಢ್ವಾಲ್‌ನ ಈ ಮಯೂರನೃತ್ಯವು ಮಧ್ಯಕಾಲೀನವೂ, ಹೆಚ್ಚು ಜನಪ್ರಿಯವಾಗಿಯೂ ಆಗಿ ಪ್ರಚಲಿತವಿತ್ತೆನ್ನುತ್ತಾರೆ.

ಲಢಾಕ್‌ನ 'ಚಾಖೆಸ್' (Chaches) ಅಥವಾ ಮಯೂರನೃತ್ಯವು ಸ್ತ್ರೀಯರು ನರ್ತಿಸುವಂತಹುದಾಗಿದ್ದು, ಸುಂದರಿಯಂತಹ (ಷಹನಾಯ್ ವಾದ್ಯದ ಸಣ್ಣ ರೂಪ) ಗಾಳಿವಾದ್ಯ,

 ISSN No : 2321-2519

ತಮಟೆಗಳ ವಾದನಗಳು ಮತ್ತು ಪುರುಷರ ಗಾಯನಗಳೊಂದಿಗೆ ನರ್ತಿಸುತ್ತಾರೆ. ಇದರ ಆಹಾರ್ಯ ಹಾಗೂ ನರ್ತನಗಳಲ್ಲಿ ಮಯೂರಾಭಿನಯವು ವಿಶೇಷವಾಗಿ ತೋರುವುದಿಲ್ಲ.

ಭಾರತದ ಹೆಚ್ಚಿನ ಪ್ರದೇಶಗಳಲ್ಲಿ ಮಯೂರನೃತ್ಯಪ್ರಕಾರವಿರುವುದು ಮಾತ್ರವಲ್ಲದೆ ಸಿಂಹ, ಕುದುರೆ, ಪಾರಿವಾಳ ಮುಂತಾದ ನೃತ್ಯಪ್ರಕಾರಗಳೂ ಜನಪದರಲ್ಲಿವೆ. ಇದರಲ್ಲಿ "ಸುವ ನೃತ್ಯ"ವು ಛತ್ತೀಸಗಢದ ಆದಿವಾಸಿಗಳು ನರ್ತಿಸುವಂತಹುದಾಗಿದ್ದು ಇದು 'ಪಾರಿವಾಳ ನೃತ್ಯ'ವೆಂದೂ ಹೆಸರಾಗಿದೆ. ಇದರಲ್ಲಿ ಪುರುಷರು ತಮ್ಮ ಆಯ್ಕೆಯ ವಾದ್ಯಗಳನ್ನು ನುಡಿಸಿದರೆ, ಸ್ತ್ರೀಯರೂ, ಹೆಣ್ಣುಮಕ್ಕಳೂ ಪಾರಿವಾಳಗಳಂತೆ ನಟಿಸಿ ನರ್ತಿಸುತ್ತಾರೆ!

ವಿಶ್ವದ ಇತರ ದೇಶಗಳ ಜನಾಂಗಗಳಲ್ಲಿ ಮಯೂರ ಗೀತ – ನೃತ್ತಗಳು

ಗ್ರೀಕ್ ತತ್ವಜ್ಞಾನಿಯಾದ ಅರಿಸ್ಟಾಟಲನು (ಕ್ರಿ. ಪೂ. 384 – 322) ಮಯೂರದ ಸ್ವರೂಪ, ಆಹಾರ ಇತ್ಯಾದಿಗಳನ್ನು ಕುರಿತು ಹೇಳಿದ್ದಾನೆ. ಅಲೆಕ್ಸಾಂಡರನು ಭಾರತದಿಂದ 200 ನವಿಲಿನ ಮರಿಗಳನ್ನು ಗ್ರೀಕಿಗೆ ತೆಗೆದುಕೊಂಡು ಹೋದನೆಂದೂ ಅಲ್ಲಿಂದ ಕ್ರಿಸ್ತಪೂರ್ವದಲ್ಲಿಯೇ ಯೂರೋಪ್ ಖಂಡದಲ್ಲಿ ನವಿಲು ಪಕ್ಷಿಯ ಸಂತಾನವು ಹಬ್ಬಲು ಕಾರಣವಾಯಿತೆಂದೂ ಸಂಶೋಧಕರು ಹೇಳುತ್ತಾರೆ.

ವಿಶ್ವದಲ್ಲಿ ಏಷ್ಯಾಖಂಡದಲ್ಲಿಯೆ ಮಯೂರನೃತ್ಯವು ಹೆಚ್ಚು ನರ್ತಿಸಲ್ಪಡುತ್ತಿದ್ದು, ಆಫ್ರಿಕಾ ಖಂಡದ ಕಾಂಗೋದಲ್ಲಿಯೂ ಈ ನೃತ್ಯಪ್ರಕಾರವು ಇದೆ. ಆಫ್ರಿಕಾದೇಶದ ಜನಪದದಲ್ಲಿಯೂ ಅನೇಕ ಜನಪದಗೀತೆಗಳು ಮಯೂರವನ್ನು ಕುರಿತಾಗಿದ್ದು ನರ್ತಿಸಲ್ಪಡುತ್ತವೆ. ಇವುಗಳ ಸಂಗ್ರಹವನ್ನು ನವೋಮಿ ವಾನ್ ತೊಲ್ (Naomi Van Tol)ರವರು ಸಂಗ್ರಹಿಸಿದ್ದಾರೆ. ಮಯೂರನರ್ತನಪದ್ಧತಿಯು ವಿಶೇಷವಾಗಿ ಭಾರತ, ಶ್ರೀಲಂಕಾ, ಬಾಂಗ್ಲಾದೇಶ, ಇಂಡೋನೇಷ್ಯಾ, ಮ್ಯೆಯ್ನಾರ್, ಪಶ್ಚಿಮ ಜಾವಾ, ಕಾಂಬೋಡಿಯಾ ದೇಶದ ಪಶ್ಚಿಮ ಹಾಗೂ ಉತ್ತರಭಾಗಗಳಲ್ಲಿದ್ದು ಜನಪ್ರಿಯ



ನರ್ತನವಿಧವಾಗಿದೆ. ಬಹುಶಃ ಈ ದೇಶಗಳಲ್ಲಿಯೇ ಮಯೂರ ಪಕ್ಷಿ ಸಂಕುಲವು ಇರುವುದೂ, ಕೃಷಿಸಹಕಾರಿಯೆಂದೂ, ಅತಿಸುಂದರವೆಂದೂ, ಔಷಧೀಯ ಗುಣಗಳುಳ್ಳದ್ದು ಎಂಬ ನಂಬುಗೆಗಳ ಕಾರಣಗಳಿಂದಾಗಿಯೂ ಅವಕ್ಕೆ ಪೂಜನೀಯವೆಂದೂ, ಶುಭಸಂಕೇತಕಾರಕವೆಂಬ ಉನ್ನತ ಸ್ಥಾನಗಳೂ ದೊರಕಿವೆ. ಮಾತ್ರವಲ್ಲದೆ, ಪಕ್ಷಿಯ ಸೌಂದರ್ಯವೂ ಶಿಷ್ಟ ಹಾಗೂ ಜನಪದ ಲಲಿತಕಲೆಗಳಲ್ಲಿ ಪ್ರಯುಕ್ತಿಯಾಗಲು ಕಾರಣವಾಯಿತೆಂದು ತೋರುತ್ತದೆ.

ಯಹೂದ್ಯರಲ್ಲಿಯೂ 'ಚಿನ್ನದ ನವಿಲು' (Di Goldene Pave) ಎಂಬ ಪ್ರಸಿದ್ಧ ಜನಪದ ಗೀತವಿದೆ ಹಾಗೂ ನವಿಲನ್ನು ಕುರಿತಾದ ಇನ್ನೂ ಅನೇಕ ಜನಪದ ಗೀತೆಗಳೂ ಕಥಾನಕಗಳು ಇವೆ. ಕ್ರಿ. ಶ. 1938 ರಲ್ಲಿ ಬೊರೆಗೊವ್ಸ್ಕಿಯವರು ಯಹೂದ್ಯರ ಜನಪದ ಗೀತೆಗಳ (Jewish Folk Songs) ಸಂಗ್ರಹವನ್ನು ಮಾಡಿ ಮುದ್ರಿಸಿದ್ದಾರೆ. ಅದರಲ್ಲಿ ಒಂದು ಕಥೆಯು ಕನ್ಯೆಯೊಬ್ಬಳು ತಾನೇ ಮಯೂರಿಯಾಗಿ ವೇಷಬದಲಿಸಿ ತನ್ನ ಮಾತಾಪಿತೃಗಳ ಗೃಹದತ್ತ ಸಾಗುತ್ತಾಳೆ. ರಷ್ಯಾದೇಶದಲ್ಲಿ ಕ್ರಿ. ಶ. 1901ರಲ್ಲಿ ಗಿನ್ಜ್ ಬೆರ್ಗಂಡ್ ಮರೆಕ್ ರವರು (Ginzbergand Marek) ಸಂಗ್ರಹಿಸಿದ ಯಹೂದ್ಯರ ಜನಪದಗೀತ ಸಂಗ್ರಹದ ಗೀತವೊಂದರಲ್ಲಿ ಮಯೂರವು

ಕನ್ಯೆಯೊಬ್ಬಳ ಸ್ಥಿತಿಗತಿಗಳ ಬಗ್ಗೆ ಆಕೆಯ ಮಾತಾಪಿತೃಗಳಿಗೆ ಸುದ್ದಿಯನ್ನು ರವಾನಿಸುವ ದೂತಿಯಾಗಿದೆ. ಹಂಗರಿ ದೇಶದ ಮಯೂರನೃತ್ಯದ ಗೀತೆಗಳು ಹೆಚ್ಚು ಜನಪ್ರಿಯತೆಯನ್ನು ಗಳಿಸಿವೆ (ಹಾಡೊಂದು 'Felszallot a Pava'ಎಂದು ಆರಂಭಿಸುತ್ತದೆ.). ಮಧ್ಯಯುಗದಲ್ಲಿಯೇ ಯೂರೋಪಿನ ಅನೇಕ ಜನಾಂಗಗಳಲ್ಲಿ (History of Dance by Gayle Kassing, chapter V..) ಮಯೂರನೃತ್ಯವು ಪ್ರಚಲಿತವಿದ್ದಿದ್ದು ಬಹು ಜನಪ್ರಿಯತೆಯನ್ನು ಗಳಿಸಿತ್ತು.

ಏಷ್ಯಾ ಹಾಗೂ ಯೂರೋಪ್ ಖಂಡಗಳಲ್ಲಿ ಮಯೂರನೃತ್ಯ ಮಾತ್ರವಲ್ಲದೆ, ಸ್ನೀನ್ಗ್ ಟೊಸೊಂಗ್ (Sneang Tosoang Dance) ಎಂಬ ಹೆಸರಿನ ಸರ್ಪ, ವ್ಯಾಘ್ರ, ಹರಿಣಗಳನ್ನೊಳಗೊಂಡ ನೃತ್ಯಗಳೂ ಇದ್ದು, ಕಾಂಬೋಡಿಯಾ ದೇಶದ ಫುಮ್ ಕ್ರವನ್ಹ್ (Phnum Kravanh) ಪ್ರದೇಶದ

ಪುರ್ಸತ್ (Pursat) ಪ್ರಾಂತ್ಯದ ಪಿಯರ್ (Pear) ಜನಾಂಗವೇ ಈ ನೃತ್ಯಗೀತಗಳಿಗೆ ಮೂಲವಾಗಿದ್ದು ಹೆಚ್ಚು ಪ್ರಚಲಿತದಲ್ಲಿವೆ. ಕಾಂಬೋಡಿಯಾ ದೇಶದಲ್ಲಿ ನೃತ್ಯವು ಮೂರು ಮುಖ್ಯ ವಿಭಾಗಗಳಾಗಿ ಪರಿಗಣಿಸಲ್ಪಟ್ಟಿದೆ. ಇವು –

1. ರಾಜರ ಆಸ್ಥಾನಗಳಲ್ಲಿ ಶಾಸ್ತ್ರೀಯವಾಗಿ ನರ್ತಿಸಲ್ಪಟ್ಟು ರಾಜರನ್ನು ಆಸ್ಥಾನಕ್ಕೆ ಆಹ್ವಾನಿಸುವ ಸಮಯದಲ್ಲಿಯೂ, ಮನರಂಜನೆಗಾಗಿಯೂ, ದೇವತಾ ಉತ್ಸವಾದಿ ಸಮಯಗಳಲ್ಲಿಯೂ, ಗೌರವಾರ್ಪಣೆಗಾಗಿಯೂ ನಡೆಯುತ್ತಿದವು. ಇದರಲ್ಲಿ ಅಪ್ಸರಾ ನೃತ್ಯವು (Robam Tep Apsara = Lakhon Kbach Boran Khmer) ಬಹಳ ಮುಖ್ಯವಾದದ್ದು. ಇದರ ಆಹಾರ್ಯವೂ ಆಂಗಿಕವೂ ಬಹಳ ಸುಂದರವಾಗಿದೆ. ಈ ಶಾಸ್ತ್ರೀಯ ನೃತ್ಯಕ್ಕೆ ಬಹಳಷ್ಟು ಇತಿಹಾಸವಿದೆ. ಅಪ್ಸರಾನೃತ್ಯವೆಂದು ಹೆಸರಿದ್ದರೂ, ಈ ನೃತ್ಯರೂಪಕದಲ್ಲಿ ದೇವತೆಯರೂ, ರಾಕ್ಷಸರೂ ಇರುತ್ತಾರೆ! (ಈ ರೀತಿಯಾಗಿ ಕಲ್ಪನೆಗಳಿರುವ ಕಾಂಬೋಡಿಯಾ ದೇಶವಾದರೂ ಬೃಹದ್ಭಾರತಕ್ಕೆ ಸೇರಿದ್ದ ಪಲ್ಲವ ಸಾಮ್ರಾಜ್ಯದೊಂದಿಗೆ ನಿಕಟ ಸಂಪರ್ಕವನ್ನು ಹೊಂದಿದ್ದ ಕಾಂಭೋಜ ದೇಶವಲ್ಲವೇ? ಕಾಂಭೋಜದೇಶವು ನಮ್ಮ ಹಿರಿಯರಿಗೆ ಬಹು ಹಿಂದಿನಿಂದಲೂ ಉದಾ– ಮಹಾಭಾರತ ಕಾಲದಲ್ಲಿಯೇ ಪರಿಚಿತವಾಗಿತ್ತು. ಅಲ್ಲಿಂದ ಕುದುರೆಗಳು ಆಮದಾಗುತ್ತಿದ್ದವು! ಪ್ರಾಚೀನ ಬೃಹದ್ಭಾರತದ ಅಂಗವಾಗಿದ್ದ ಕಂಬುಜದೇಶದಿಂದ (ಕ್ಯಾಂಬೋಡಿಯಾ) ಬಂದಿದ್ದ ರಾಗದ ಹೆಸರು ಕಾಂಭೋಜಿ. ಕಾಂಬೋಧಿ, ಕಾಂಬೋಜ ಎಂದು ಮುಂತಾದ ದೇಶಸೂಚಕ ಅನ್ವರ್ಥನಾಮವಾಗಿಯೇ ಇವು ಇವೆ. ಈ ರಾಗವನ್ನು ಮತಂಗ, ಕಶ್ಯಪ, ಯಾಷ್ಟಿಕಾದಿಗಳು ಕಾಂಬೋಜಿ ಎಂಬ ನಾಮರೂಪದಲ್ಲಿ ಗ್ರಹಿಸಿದ್ದಾರೆ. ಖ್ಮೇರ್ ಭಾಷೆಯಲ್ಲಿ 'ಕಾಂಪೂಚಿಯಾ' ಎಂದು ಕರೆಯಲ್ಪಡುವ ಈ ಶಬ್ದವು ಸಂಸ್ಕೃತದ 'ಕಂಬುಜದೇಶ' ದಿಂದ ವ್ಯುತ್ಪನ್ನವಾಗಿದ್ದು, ಆ ದೇಶವಾಚಕವಾದ ಈ ಕಾಂಭೋಜಿ, ಹರಿಕಾಂಭೋಜಿ ರಾಗಗಳು ಇಂದೂ ಭಾರತೀಯ ಸಂಗೀತ ಪ್ರಭೇದಗಳಾದ ಜನಪದ ಹಾಗೂ ಶಾಸ್ತ್ರೀಯ ಸಂಗೀತಗಳಲ್ಲಿ ಬಹುವಾಗಿ ಪ್ರಯೋಗದಲ್ಲಿರುವ ರಾಗಗಳಾಗಿವೆ.)

2.ಜನಪದ ನೃತ್ಯಗಳು, ಜನಪದರ ಸಾಂಸ್ಕೃತಿಕ ಪರಂಪರೆಯನ್ನು ಹೇಳುವಂತಹವು. ಇದರಲ್ಲಿ ರೊಬಮ್ ನ್ಗ್ಲೋಕ್ ಪೇಯ್ಲಿನ್ (Robam Kngaok Pailin) ಮಯೂರನೃತ್ಯವು 'ಕುಲ' (Kula) ಜನಾಂಗದ ಸಂಸ್ಕೃತಿಯನ್ನು ಬಿಂಬಿಸುವ, ಪೇಯ್ಲಿನ್‌ನ ಜನರು ನರ್ತಿಸುವಂತಹುದು. ಭಾರತದಲ್ಲಿರುವ ಉದ್ದೇಶಗಳಲ್ಲಿಯೇ ಪ್ರಯೋಗಿಸಲ್ಪಡುವ ಈ ಮಯೂರನೃತ್ಯವು ಪಲ್ಲವರ ಕಾಲದಲ್ಲಿ ಕಾಂಭೋಜ ದೇಶಕ್ಕೆ ಹರಡಿರಬಹುದಾದ ಸಾಧ್ಯತೆಯೇ ಹೆಚ್ಚಿದೆ.

3.ಸಾಮಾಜಿಕರು ಹಬ್ಬ, ಉತ್ಸವಾದಿಗಳ ಸಮಯದಲ್ಲಿ, ಸಮಾರಂಭಗಳಲ್ಲಿ ನರ್ತಿಸುವಂತಹವು.

ಚೀನಾದೇಶದ ಡಾಯ್ (Dai) ಬುಡಕಟ್ಟಿನ ಜನಾಂಗದಲ್ಲಿ ಮಯೂರನೃತ್ಯವು ಪ್ರಮುಖ ನೃತ್ಯವಾಗಿದೆ. ಇಲ್ಲಿ, ಈ ನೃತ್ಯವನ್ನು ಹಿಮಾಲಯ ಹಾಗೂ ಭಾರತದ ಇನ್ನಿತರ ಅನೇಕ ಪ್ರದೇಶಗಳಲ್ಲಿ ಇರುವಂತೆಯೇ ಸೌಂದರ್ಯ, ಸದ್ಗುಣ, ವಿವೇಕ, ಆಕರ್ಷಕ, ಹಾಗೂ ಜ್ಞಾನಗಳ ಶುಭಸೂಚಕ ಸಂಕೇತಗಳಾಗಿ ಪರಿಗಣಿಸಿದೆ. ಚೀನಾದೇಶದಲ್ಲಿ ಅಲ್ಪಸಂಖ್ಯಾತರಾಗಿರುವ 'ಡಾಯ್' ಮತ್ತು ಜಿಂಗ್ ಪೊ ಜನಾಂಗಗಳಲ್ಲಿ ಮಯೂರನೃತ್ಯವು ಇನ್ನೂ ಜೀವಂತವಾಗಿದ್ದು, ನವಿಲು ಪವಿತ್ರವಾದ, ಆನಂದ ಹಾಗೂ ಶುಭದ್ಯೋತಕವಾದ ಪಕ್ಷಿಯಾಗಿದೆ. ಇದರಿಂದಾಗಿ ನವಿಲಿಗೆ ಸಂಬಂಧಿಸಿದಂತೆ ಅನೇಕ ಆಧ್ಯಾತ್ಮಿಕ ಹಾಗೂ ಐತಿಹಾಸಿಕ ಸನ್ನಿವೇಶಗಳ ಕಥೆಗಳು ಹೆಣೆಯಲ್ಪಟ್ಟಿವೆ. ಯುನ್ನನ್ ಪ್ರಾಂತ್ಯದ 'ಡಾಯ್' ಜನಾಂಗದವರಿಗೆ ಸಾವಿರಾರು ವರ್ಷಗಳ ಇತಿಹಾಸವಿದ್ದು ಅವರಿಗೆ ಪ್ರಿಯವಾದ ಮಯೂರನೃತ್ಯವು ಅವರ ಪ್ರತಿಯೊಂದು ಸಂಪ್ರದಾಯಪೂರ್ವಕ ಕಟ್ಟುಕಟ್ಟಲೆಂಯ ಆಚರಣಾ ವಿಧಿಗಳಿಗೂ ನರ್ತಿಸಲ್ಪಡುತ್ತದೆ. ಈ ನರ್ತನವು ಪರಂಪರಾಗತವಾಗಿ ಉಳಿದು ಬೆಳೆಯುತ್ತಿವೆ. ಸಾವಿರ ವರ್ಷಗಳ ಹಿಂದೆ ಡಾಯ್ ಜನಾಂಗದ ಹಿರಿಯನೊಬ್ಬನು ಮಯೂರವೊಂದು ಅತ್ಯಂತ ಸುಂದರವಾಗಿ ನರ್ತಿಸುವುದನ್ನು ನೋಡಿ ಅದನ್ನೇ ಅನುಕರಿಸಿ ತಾನೂ ನರ್ತಿಸಿದನೆಂದೂ, ಅದೇ ಪರಂಪರೆಯನ್ನು ಜನಾಂಗವು

ಮುಂದುವರೆಸಿತೆಂದೂ ಹೇಳಲಾಗುತ್ತದೆ. ಡೊಂಘನ್ (Donghan) ರಾಜಪರಂಪರೆಯ ಆಳ್ವಿಕೆಯ ಸಮಯದಲ್ಲಿ ಪ್ರಾಚೀನ ಚೀನಾದೇಶದ ರಾಜಧಾನಿಯಾಗಿದ್ದ ಲ್ಯೂಯಾಂಗ್ (Luoyang) ಗೆ ಹೋಗಿ ಈ ಮಯೂರನೃತ್ಯವನ್ನು ಚಕ್ರವರ್ತಿಗೆ ಸಮರ್ಪಿಸುತ್ತಿದ್ದರೆಂದೂ ಐತಿಹ್ಯವಿದೆ. ಅದು ಸತ್ಯವೇ ಆಗಿದ್ದಲ್ಲಿ ಡಾಯ್ ಜನಾಂಗದ ಮಯೂರನೃತ್ಯಕ್ಕೆ ಎರಡುಸಾವಿರ ವರ್ಷಗಳಿಗಿಂತಲೂ ಹೆಚ್ಚಿನ ಪ್ರಾಚೀನತೆಯು

ಇದೆಯೆನ್ನಬಹುದು! ಈ ನೃತ್ಯವನ್ನು ನರ್ತಿಸಲೂ ಕೆಲವು ಕಟ್ಟುಕಟ್ಟಲೆಯ ವಿಧಿವಿಧಾನಗಳು, ನಿಯಮಗಳು ಇವೆ. ಡಾಯ್ ಜನಾಂಗಕ್ಕೆ ನವಿಲಿನ ಜೀವನಶೈಲಿಯ ಜ್ಞಾನವೂ ಅನುಭವಗಳೂ ಹೆಚ್ಚಿದ್ದು ಸಂಪೂರ್ಣವಾಗಿ ನವಿಲಿನ ಹಾವಭಾವಗಳನ್ನು ಸೊಗಸಾಗಿ ಅನುಕರಿಸುತ್ತಾರೆ. ಆರಂಭದಲ್ಲಿ ನರ್ತನವು ನವಿಲು ತನ್ನ ಆವಾಸಸ್ಥಾನದಿಂದ ಹಾರುತ್ತ ಹೊರಟು, ತನ್ನ ಕೊರಳನ್ನು ಕೊಂಕಿಸುತ್ತ, ಸುತ್ತಮುತ್ತ ನೋಡುತ್ತ, ಗಮನಿಸುತ್ತ, ಸುಂದರವಾಗಿ ನರ್ತಿಸಲು ತೊಡಗುತ್ತದೆ. ಹುಲ್ಲಹಾಸಿಗೆಯ ಮೇಲೆ ನರ್ತಿಸುತ್ತ, ಜಲಪಾನಮಾಡುವಂತೆ, ಆಹಾರಕ್ಕಾಗಿ ಹುಡುಕುವಂತೆ, ನಂತರ ಕಾರಂಜಿಯ ಅಥವಾ ನದಿಯ ದಡದಲ್ಲಿ ನೀರಿನಲ್ಲಿ ತೋಯುತ್ತ, ಮೀಯುತ್ತ ತನ್ನ ಸುಕೋಮಲ ಸುಂದರ ವರ್ಣರಂಜಿತ ಗರಿಗಳನ್ನು ಕೆದರಿ ನೀರನ್ನು ಕೊಡವುವಂತೆ ನರ್ತನವು ಇದ್ದು, ಕಡೆಯಲ್ಲಿ ಗರಿಗೆದರಿ ಸಂತೋಷವಾಗಿ ಹಾರುವಂತೆ ಇರುತ್ತದೆ. ನರ್ತಕಿಯು ಮೃದುಮಧುರವಾಗಿ ತೊನೆದಾಡುವಂತೆ, ತರಂಗಿತವಾಗಿರುವಂತೆ ಮೊಣಕಾಲುಗಳನ್ನು ಬಾಗಿ ಬಳಕಿಸುತ್ತಲೂ, ಅನೇಕ ಶ್ರೇಣಿಗಳಲ್ಲಿ, ವರಸೆಗಳಲ್ಲಿ ಹಸ್ತಾಭಿನಯಗಳಲ್ಲಿ ಮಯೂರವನ್ನು ಅಭಿನಯಿಸುತ್ತಾಳೆ. ವೃಕ್ಷದೇವತೆಯಂತೆ, ಯಕ್ಷಿಣಿ, ಕಿನ್ನರಿಗಳಂತೆ ಸುಸಂಸ್ಕೃತ, ಲಾವಣ್ಯಯುತ, ನವುರಾದ, ಸೂಕ್ಷ್ಮತರವಾದ, ಜಟಿಲವಾದ, ಕುಶಾಗ್ರಮತಿಯಿಂದ, ಆದರೆ ಬಲು ಸೊಬಗಿನಿಂದ ಕೂಡಿ, ನಯವಾದ ಮೈಯ ಬಾಗು – ಬಳುಕು, ತಿರುವು – ಕೊಂಕುಗಳಿಂದ, ಇಡೀ ದೇಹವನ್ನೇ ಕಂಪಿಸುತ್ತ ನಯನ ಮನೋಹರವಾಗಿ ನರ್ತಿಸುತ್ತಾಳೆ. ಡಾಯ್ ಜನಾಂಗದ ಪುರುಷರೂ ಸ್ತ್ರೀಯರೂ ನರ್ತಿಸುವ ಈ ಆನಂದಘನೀಭೂತವಾದ ಮಯೂರನರ್ತನದ ರೀತಿಯು, ಜ್ಞಾನಪೂರ್ಣವಾಗಿ, ಲಾವಣ್ಯಯುಕ್ತವಾಗಿ, ರಸಭರಿತ ವಾಗಿದ್ದು, ಮಾರ್ಮಿಕವಾದ,



ಸೂಕ್ಷ್ಮತರವಾದ ಭಾವಪೂರ್ಣ ಅಭಿನಯಗಳಿಂದ ಕೂಡಿದ್ದರಿಂದಾಗಿ ಚೀನಾದೇಶದಲ್ಲಿಯೇ ಅನೇಕ ಜನಾಂಗೀಯ ನೃತ್ಯಗಳಲ್ಲಿಯೇ ಈ ನೃತ್ಯವು ಉನ್ನತಸ್ಥಾನವನ್ನು ಗಳಿಸಿ, ಈ ನೃತ್ಯದಿಂದಾಗಿಯೇ ಡಾಯ್ ಜನಾಂಗದ ಪರಂಪರೆಯು ಅವರ ದೇಶದಲ್ಲಿಯೇ ಅತ್ಯುತ್ತಮವೆಂದು ಚೀನಾದೇಶದಲ್ಲಿ ಪರಿಗಣಿಸಲ್ಪಟ್ಟಿದೆ. ಮಯೂರವನ್ನು ಅತ್ಯಂತವಾಗಿ ಪೂಜ್ಯ ಭಾವದಿಂದ ನೋಡುವ ಡಾಯ್ ಜನಾಂಗವು ಅವರ ಸುಖಜೀವನದ ಕೋರಿಕೆ, ಹಾರೈಕೆಗಳನ್ನು ಮಯೂರನೃತ್ಯದ ಮೂಲಕ ಪ್ರಾರ್ಥಿಸುತ್ತ ತಮ್ಮ ಭಕ್ತಿಯನ್ನು ಪ್ರಕೃತಿಗೆ ಸಮರ್ಪಿಸುತ್ತಾರೆ.

ಟಿಬೆಟ್ ಸಂಸ್ಕೃತಿಯಲ್ಲಿ ಮಯೂರನೃತ್ಯವು 'ಯಾಕ್' ನೃತ್ಯದಷ್ಟೇ ಪ್ರಸಿದ್ಧವಾಗಿದೆ. ಇಂಡೋನೇಷ್ಯಾದ ಪಶ್ಚಿಮ ಜಾವಾ ಹಾಗೂ ರಿಯಾಗ್ ಪ್ರದೇಶಗಳಲ್ಲಿ ಸುಂಡನೀಸ್ ಜನಾಂಗದಿಂದ 'ತಾರೀ ಮೆರೆಕ್' ಅಥವಾ 'ಮೆರೆಕ್' (=ಮಯೂರ) ನೃತ್ಯವು ನರ್ತಿಸಲ್ಪಡುತ್ತದೆ. ಶ್ರೀಲಂಕಾದಲ್ಲಿ ಪೆರಹರ ಉತ್ಸವಾದಿಗಳ ಕಾಲದಲ್ಲಿ ಮಯೂರನೃತ್ಯವು ನರ್ತಿಸಲ್ಪಡುತ್ತದೆ.

ಭಾರತೀಯ ಗೀತವಾದನನರ್ತನ ಶಾಸ್ತ್ರಗಳಲ್ಲಿ ಮಯೂರ

ವಾದ್ಯಗಳಲ್ಲಿ : ಗ್ರೀಕ್ ಮತ್ತು ಅರೇಬಿಕ್ ಭಾಷೆಗಳಲ್ಲಿ ನವಿಲಿಗೆ 'ಟಾವ್ಸ್' ಎನ್ನುತ್ತಾರೆಂದು ಈಗಾಗಲೇ ಹೇಳಿದೆ. ಅವರಲ್ಲಿ ನವಿಲಿನಂತೆ ರೂಪ ಹಾಗೂ ವರ್ಣರಂಜಿತವಾದ ತಂತೀವಾದ್ಯವಿದೆ. ಅದನ್ನವರು 'ಟಾವ್ಸ್' ಎಂದೇ ಕರೆಯುತ್ತಾರೆ. ಭಾರತದಲ್ಲಿ ಮಯೂರ ರೂಪದಂತೆಯೇ ತಯಾರಿಸಲ್ಪಡುವ ಮಯೂರವೀಣೆಯು ಪ್ರಾಚೀನ ಪ್ರಸಿದ್ಧವಾಗಿದೆ. ಪ್ರಾಚೀನದ ಕೆಲವು ವಂಶೀಗಳ ಊದುವ ಅಗ್ರಭಾಗವನ್ನು ಮಯೂರದ ಶಿರದಂತೆಯೇ ರಚಿಸಿರುತ್ತಿದ್ದರು.

ತಾನಗಳಲ್ಲಿ : ಕರ್ನಾಟಕಶಾಸ್ತ್ರೀಯಸಂಗೀತಪದ್ಧತಿಯಲ್ಲಿ ತಾನವು ಪ್ರೌಢಭಾಗ. ತಾನವೆಂದರೆ ಸ್ವರವನ್ನು ವಿಸ್ತರಿಸುವುದು ಎಂದು ಪ್ರಾಚೀನ ಸಂಗೀತಶಾಸ್ತ್ರದ ಪರಿಭಾಷೆ. ಈಗ ತಾನಗಳನ್ನು ವಿವಿಧ ಲಯಗಳಲ್ಲಿ ವಿವಿಧ ಜತಿಗಳಲ್ಲಿ, ವಿವಿಧ ನಡೆಗಳಲ್ಲಿ ಹಾಡಿ ನುಡಿಸಲಾಗುತ್ತದೆ. ಪಲ್ಲವಿಯ ಪ್ರಸ್ತುತಿಯಲ್ಲಿ ರಾಗಾಲಾಪನೆಯ ನಂತರ ಹಾಡಿ – ನುಡಿಸುವ ತಾನಕ್ಕೂ ದೀರ್ಘ ಪರಂಪರೆಯಿದೆ. ವೀಣಾ ಸಂಪ್ರದಾಯದಲ್ಲಿ ಛಪಾವಳಿ (ದೀರ್ಘಸ್ವರ ಪ್ರಧಾನ), ಉದಟಿ (ಹ್ರಸ್ವಸ್ವರ ಪ್ರಧಾನ) ಉಗ್ರ (ಲಂಘನಗಳಿರುವ ದೀರ್ಘಸ್ವರ ಪ್ರಯೋಗ),

 ISSN No : 2321-2519

ಮತ್ತು ಸಂಚಾರಿ (ವಿಲಂಬ ಮತ್ತು ದ್ರುತ ಲಯಗಳ ಪ್ರಯೋಗ) ಎಂದು ವಿಂಗಡಿಸುತ್ತಿದ್ದರು. ಇವುಗಳ ಅಭ್ಯಾಸದಿಂದ ಪ್ರೌಢವಾದ ಎಡ–ಬಲ ಹಸ್ತವ್ಯಾಪಾರಗಳು ಸಿದ್ಧಿಸುತ್ತಿದ್ದವು. ಘನಪಂಚಕ ರಾಗಗಳಾದ ನಾಟಿ, ಗೌಳ, ಆರಭಿ, ವರಾಳಿ ಮತ್ತು ಶ್ರೀರಾಗಗಳಲ್ಲಿಯೂ ಇನ್ನಿತರ ಅನೇಕ ರಾಗಗಳಲ್ಲಿಯೂ ವಿವಿಧ ಸ್ಥಾಯಿ, ಲಯ, ಗತಿ, ಕಾಲಗಳಲ್ಲಿ ಒಂದೊಂದಕ್ಕೂ ಮೂವತ್ತು ತಾನಗಳನ್ನಾದರೂ ಅಭ್ಯಾಸ ಮಾಡಿ ನುಡಿಸಬೇಕಾಗಿತ್ತು. ತಾನಗಳನ್ನು ವಿವಿಧ ಜಂತುಗಳ ಗತಿವೈಶಿಷ್ಟ್ಯವನ್ನು ಅನುಸರಿಸುವ ಮಾನವ, ಗಜ, ಅಶ್ವ, ಮಯೂರ, ಮರ್ಕಟ, ಮಂಡೂಕ, ಕುಕ್ಕುಟ, ಮತ್ತು ಚಕ್ರ ಎಂಬ ಎಂಟು ಬಗೆಯ ತಾನಗಳನ್ನು ಹಿಂದಿನವರು ಗಾಯನವಾದನಗಳಲ್ಲಿ ತಾಳಸಹಿತವಾಗಿ ಮತ್ತು ತಾಳರಹಿತವಾಗಿ ಪ್ರಸ್ತುತಿಗೊಳಿಸುತ್ತಿದ್ದರು. ಕರ್ಣಾಟಕದ ವೈಣಿಕರು ಛತ್ತೀಸ (=36) ತಾನಗಳೆಂಬ ಚಿತ್ರವಿಚಿತ್ರ ತಾನಗಳನ್ನು ನುಡಿಸುವ ಪಾಂಡಿತ್ಯವನ್ನು ಗಳಿಸಿಕೊಂಡಿದ್ದರು. ಅವುಗಳಲ್ಲಿ ಮೇಲೆ ಹೇಳಿದ ತಾನಗಳು ಸೇರಿಕೊಂಡಿವೆ.

ತಾಳಗಳಲ್ಲಿ : ಪುಂಡರೀಕ ವಿಠ್ಠಲನು 86 ದೇಶೀ ತಾಳಗಳನ್ನು ತನ್ನ ನರ್ತನನಿರ್ಣಯದ ಮೊದಲನೆಯ ತಾಲಧಾರಿ ಪ್ರಕರಣದಲ್ಲಿ ಹೆಸರಿಸಿದ್ದಾನೆ. ಅದರಲ್ಲಿ ಪಶು–ಪಕ್ಷಿಗಳ ಹೆಸರುಗಳನ್ನು ಮಾತ್ರ ಇಲ್ಲಿ ನೀಡಲಾಗುವುದು. ಶರಭರಾಜ, ಭ್ರಮರ, ಗಜಲೀಲ, ಕಂಕ, ಮಯೂರ, ಮೃಗರಾಜ, ಮಕರಭ್ರಮ, ಸಿಂಹ, ಹಯಲೀಲಾ, ಗಜತಾಲ, ಸಿಂಹಲೀಲ, ಹಂಸಲೀಲ, ಶರಭಲೀಲ. ನರ್ತನನಿರ್ಣಯದಲ್ಲಿ ಹೇಳಿದ ಶರಭರಾಜ, ಭ್ರಮರ, ಕಂಬುಕ, ಕಂಕ, ಮಯೂರ, ಮೃಗರಾಜ, ಮಕರಭ್ರಮ ತಾಳಗಳಿಗೆ ಅನ್ಯತ್ರ ಲಕ್ಷಣಗಳನ್ನು ಹೇಳಿಲ್ಲ. ನರ್ತನನಿರ್ಣಯದಲ್ಲಿ 46ನೆಯ ತಾಳವಾಗಿ ಹೇಳಿದ ಮಯೂರತಾಳದಲ್ಲಿ ನಾಲ್ಕು ದ್ರುತಗಳು, ಲಘು, ನಾಲ್ಕು ದ್ರುತಗಳು, ಲಘು, ದ್ರುತ, ಲಘು, ದ್ರುತ, ಲಘುಗಳು ಇವೆ– 0000|0000|0|0|. ಇದರಲ್ಲಿ ರಚಿಸುವ ಪ್ರಬಂಧವು ಯಥಾಕ್ಷರವಾಗಿರುತ್ತದೆ.

ಅಭಿನಯಹಸ್ತಗಳಲ್ಲಿ : ನರ್ತನನಿರ್ಣಯದ ನಾಲ್ಕನೆಯ ಪ್ರಕರಣ (302 ಶ್ಲೋ.) – ನರ್ತಕ

(ನೃತ್ತ)ದಲ್ಲಿ ಪಂಡರೀಕ ವಿಠ್ಠಲನು ನರ್ತನದಲ್ಲಿ ರಕ್ತಿ ಹುಟ್ಟಿಸಿ, ಅಪರೋಕ್ಷವಾಗಿ (ನೇರವಾಗಿ) ಅರ್ಥವನ್ನು ತಿಳಿಸುವ, ಹೆಜ್ಜೆಯವಲ್ಲದ (– ಎಂದರೆ ಕೈ) ಬೆರಳುಗಳನ್ನು ವಿಶೇಷ ರೀತಿಯಲ್ಲಿ ವಿನ್ಯಾಸ ಮಾಡುವುದನ್ನು ಹಸ್ತವೆಂದು ಸ್ಮರಿಸಿದ್ದಾನೆ. ಅದು ಅಸಂಯುತ, ಸಂಯುತ, ನೃತ್ತ ಎಂಬ ಶಬ್ದಗಳು ಮೊದಲಿನಲ್ಲಿರುವುದರಿಂದ ಮೂರು ಬಗೆ. ಎಲ್ಲಿ ಒಂದೇ ಹಸ್ತದಿಂದ ಅರ್ಥವು ಪ್ರಕಾಶಪಡುತ್ತದೋ ಅದು ಅಸಂಯುತ ಹಸ್ತವಾಗುತ್ತದೆ. (ಶ್ಲೋ. 303). ಎರಡು ಹಸ್ತಗಳಿಂದ ಸೇರಿ ಅರ್ಥವು ಪ್ರಕಾಶಪಟ್ಟರೆ ಅದು ಸಂಯುತ ಹಸ್ತವಾಗುತ್ತದೆ. ಎರಡು ಹಸ್ತಗಳನ್ನು ವಿಶೇಷ ರೀತಿಯಲ್ಲಿ ಪ್ರಯೋಗಿಸುವುದು ನೃತ್ತಹಸ್ತವೆಂದು ಕರೆಯಲ್ಪಡುತ್ತದೆ. ನೃತ್ತಹಸ್ತಗಳಲ್ಲಿ – ಹೆಬ್ಬೆರಳು ಬಾಗಿ ತೋರು ಬೆರಳಿನ ಬುಡವನ್ನು ಆಶ್ರಯಿಸಿ ಉಳಿದ ಬೆರಳುಗಳನ್ನು ಒಟ್ಟು ಸೇರಿಸಿ ಚಾಚಿದ್ದರೆ ಅದು ಪತಾಕ ಹಸ್ತವಾಗುತ್ತದೆ. ಪತಾಕಹಸ್ತದಲ್ಲಿ ಅನಾಮಿಕೆ ಬೆರಳು ಕೊಂಕಿದರೆ ತ್ರಿಪತಾಕ ಹಸ್ತವಾಗುತ್ತದೆ. ತ್ರಿಪತಾಕ ಹಸ್ತದಲ್ಲಿ ತರ್ಜನೀಮಧ್ಯಮಾಗಳನ್ನು ಬೇರೆ ಬೇರೆಯಾಗಿ ಬಿಡಿಸಿದ್ದರೆ 'ಕರ್ತರಿ' ಎಂಬ ಅಸಂಯುತ ಹಸ್ತವಾಗುತ್ತದೆ. ಕರ್ತರಿಯ ಅನಾಮಿಕೆ ಅಂಗುಷ್ಠಗಳು ತುದಿಯಲ್ಲಿ ಕೂಡಿದ್ದರೆ ಅದು 'ಮಯೂರಹಸ್ತ'ವಾಗುತ್ತದೆ.

ಗತಿಗಳಲ್ಲಿ : ಮಾಯೂರೀ, ಭಾನವಿ, ಮೈನವಿ, ಹಯಲೀಲಾ, ಮೃಗೀ, ಹಂಸೀ, ಕುಕ್ಕುಟೀ, ಖಂಜನೀ(=ಗೀಜಗನ ಹಕ್ಕಿ), ಗಜಗಾಮಿನೀ ಎಂಬ ಗತಿಗಳನ್ನು ಪುಂಡರೀಕ ವಿಠ್ಠಲನು ನರ್ತನನಿರ್ಣಯದ ನಾಲ್ಕನೆಯ ನರ್ತಕ (ನೃತ್ತ) ಪ್ರಕರಣದ 700 ನೆಯ ಶ್ಲೋಕದಲ್ಲಿ ಹೇಳಿ, ಇವುಗಳನ್ನು ತಜ್ಞರು ಕ್ರಮವಾಗಿ ಸಂಪ್ರದಾಯಕ್ಕೆ ಅನುಸಾರವಾಗಿ ತೋರಿಸಬೇಕು ಎಂದು ಹೇಳಿದ್ದಾನೆ. ನವಿಲುಗರಿಯ ಕಣ್ಣಿನ (ಬರ್ಹಕಲಾ) ಆಕಾರದಲ್ಲಿ ಮೇಲುಗಡೆಗೆ ಮಾಡಿ ಪಾದಗಳನ್ನು ನಿಧಾನವಾಗಿ ಎತ್ತಿ ಎತ್ತಿ ಇಡುವುದರಿಂದ ಮಾಯೂರೀಗತಿ (ನವಿಲಿನ ಕುಣಿತವು) ಆಗುತ್ತದೆ. (ಶ್ಲೋ. 703 – 704) (ಸಂಗೀತದರ್ಪಣದಲ್ಲಿ ಈ ಗತಿಯನ್ನು ಮತಾಂತರದಿಂದ ಸಂಗ್ರಹಿಸಿದೆ.)

ಸ್ವರಾಭಿನಯದಲ್ಲಿ : ಷಡ್ಜ ಸ್ವರವು ಮಯೂರದಿಂದ ಹೊರಟಿದೆಯೆಂದು ಸಂಗೀತಶಾಸ್ತ್ರಗಳು ಉಲ್ಲೇಖಿಸುತ್ತವೆ. ನರ್ತನನಿರ್ಣಯದ ನಾಲ್ಕನೆಯ ನರ್ತಕ (ನೃತ್ತ)

ಪ್ರಕರಣದಲ್ಲಿ, 800 ನೆಯ ಶ್ಲೋಕದಲ್ಲಿ ಪಂಡರೀಕ ವಿಠ್ಠಲನು ಸ್ವರಾಭಿನಯವನ್ನು ಯಾವ ಗೀತಕ್ಕೆ ಯಾವ ರಾಗವಿದೆಯೋ, ಆ ರಾಗಕ್ಕೆ ಷಡ್ಜವಲ್ಲದ, ಬೇರೆ ಯಾವ ಗ್ರಹಸ್ವರವಿದೆಯೋ ಅದನ್ನು ಇಲ್ಲಿ ಹಸ್ತಗಳಿಂದ ಅಭಿನಯಿಸಬೇಕು ಎಂದು ಹೇಳಿದ್ದಾನೆ. ಬಲದಲ್ಲಿ ಅಲಪದ್ಮದಿಂದ(ಅಂಗೈಯು ಪಕ್ಕಕ್ಕೆ ತಿರುಗಿ ಬೆರಳುಗಳನ್ನೆಲ್ಲ ತಿರುಗಿಸಿದರೆ ಅಲಪಲ್ಲವವಾಗುತ್ತದೆ. ಅಲಪಲ್ಲವ ಹಸ್ತಕರಣವು ತಿರುಗುಮುರುಗಾದರೆ ಅಲಪದ್ಮಹಸ್ತವಾಗುತ್ತದೆ–ಎಂದರೆ ಕಿರುಬೆರಳಿನಿಂದ ಆರಂಭಿಸಿ ಎಲ್ಲ ಬೆರಳುಗಳನ್ನೂ ಹೊರಮುಖವಾಗಿ ತಿರುಗಿಸಿದರೆ ಅಲಪಲ್ಲವವಾಗುತ್ತದೆ. ಅಥವಾ, ವ್ಯಾವರ್ತಿತವೆಂಬ {ಮತಾಂತರದಲ್ಲಿ ಪರಿವರ್ತಿತವೆಂಬ} ನೃತ್ತಕರಣವನ್ನು ಮಾಡಿ ಕೈಬೆರಳುಗಳನ್ನು ಮಾಡಿ ಕೈಬೆರಳುಗಳು ಪಾರ್ಶ್ವದಲ್ಲಿ ತಿರುಗಿ ನಿಂತರೆ ಅದು ಅಲಪಲ್ಲವ). ಎಡದಲ್ಲಿ ಚತುರದಿಂದ (ಚತುರವೆನ್ನುವುದು ಭ್ರೂಭೇದಗಳಲ್ಲಿಯೂ ಒಂದು. ಎರಡು ಹುಬ್ಬುಗಳೂ ಒಂದು ಇನ್ನೊಂದರೊಡಗೂಡಿ ಸ್ವಲ್ಪವಾಗಿ ಅದುರಿ ಬಾಗಿದರೆ ಚತುರಾ ಎಂಬ ಭ್ರೂಭೇದವಾಗುತ್ತದೆ.) ಮಂಡಲಾಕಾರದಲ್ಲಿ ಮಾಡಿದ ಮಯೂರಲಲಿತ ಕರಣದಿಂದ ನೃತ್ಯ ಲಕ್ಷ್ಯಲಕ್ಷಣ ಪಂಡಿತರು ಷಡ್ಜವನ್ನು ತೋರಿಸಬೇಕು ಎಂದು ಹೇಳಿದ್ದಾನೆ.

ಪ್ರಬಂಧದಲ್ಲಿ : ರಸ, ಭ್ರಮರ, ಹಂಸ, ಕುರರ, ಚಂದ್ರಲೇಖಾ, ಕುಂಜರ, ತಿಲಕ, ಹಂಸಕ್ರೀಡ, ಮಯೂರ ಎಂಬ ಒಂಬತ್ತು ಭೇದಗಳಿವೆ. ಸಮಪಾದಗಳಲ್ಲಿ ಮತ್ತು ವಿಷಮಪಾದಗಳಲ್ಲಿ ಇವು ಏರ್ಪಡುತ್ತವೆ. ಇವುಗಳನ್ನು ಅದಲುಬದಲು ಮಾಡುವುದರಿಂದ ಇನ್ನೂ ಬೇರೆ ಭೇದಗಳು ಹುಟ್ಟುತ್ತವೆ. ಪಾದದೈರ್ಘ್ಯವನ್ನು ಉಳಿಸಿಕೊಂಡು 5, 6, ಅಥವಾ 7 ಲಘುಗಳನ್ನುಳ್ಳ ಒಂದು ಶಿಖಾಪದವೆಂಬ ವರ್ಣಸಮುಚ್ಚಯವನ್ನು ರಚಿಸಿದರೆ ಅದಕ್ಕೆ ಶಿಖಾಪದ ದ್ವಿಪಥಕ ಅಥವಾ ಮಯೂರವೆಂದು ಹೆಸರು. ಇದರ ವಿವರಗಳನ್ನು ಶಾರ್ಙ್ಗದೇವನು ತನ್ನ ಸಂಗೀತರತ್ನಾಕರದ ನಾಲ್ಕನೆಯ ಅಧ್ಯಾಯದ 232 – 241 ಶ್ಲೋಕಗಳಲ್ಲಿ ನೀಡಿದ್ದಾನೆ. ದೋಧಕವೆಂಬ ಛಂದಸ್ಸನ್ನು ಪ್ರಾಕೃತ ಭಾಷೆಯಲ್ಲಿ ರಚಿಸಿದರೆ ಅದನ್ನು ದೋಹಾ ಎಂದು ಕರೆಯುತ್ತಾರೆ. ಹಿಂದೀ ಮತ್ತಿತರ ಔತ್ತರೇಯ ಸಾಹಿತ್ಯಗಳಲ್ಲಿ ದೋಹಾ ಎಂಬ ಈ ಛಂದೋಪ್ರಕಾರವು ಈಗಲೂ ಬಳಕೆಯಲ್ಲಿದೆ. ಪ್ರಾಕೃತದ ದೋಹಾದಲ್ಲಿ ಸಾರಸ, ಭ್ರಮರ, ಹಂಸ. ಕುರರ, ಚಂದ್ರಲೇಖಾ, ಕುಂಜರ, ತಿಲಕ, ಹಂಸಕ್ರೀಡ, ಮಯೂರ ಎಂಬ ಒಂಬತ್ತು ಭೇದಗಳಿವೆ.

ಚಿತ್ರನೃತ್ಯಪ್ರಕಾರ : ಕೂಚಿಪೂಡಿಯಲ್ಲಿ ಮಯೂರವನ್ನು ಕಾಲಿನಿಂದ ಬರೆಯುತ್ತಾ ನರ್ತಿಸುವ ಮಯೂರ ಶಬ್ದವೊಂದಿದ್ದು; ಮಯೂರಕೌತ್ವ, ಮಯೂರ ಅಲರಿಪು ಇತ್ಯಾದಿಗಳನ್ನು ಕಾಲಕ್ರಮದಲ್ಲಿ ಭರತನಾಟ್ಯ ಕಲಾವಿದರೂ ಸಂಯೋಜಿಸಿದ್ದಾರೆ.

ಮಂಗಲಾಚರಣೆ

ಮನೋಜ್ಞವಾಗಿರುವ ಭಾರತೀಯ ಮಯೂರನೃತ್ಯವನ್ನು ನಮ್ಮ ಚಿತ್ತಪಟಲದಲ್ಲಿ ಹೀಗೆಂದು ಚಿತ್ರಿಸಿಕೊಳ್ಳಬಹುದು– 'ಚೈತ್ರಮಾಸ, ಮಥುರೆಯ ವ್ರಜದಲ್ಲಿ ರಾಸಲೀಲಾ ನೃತ್ಯವು ನಡೆಯುತ್ತಿದೆ. ಸುಂದರ ತರುಣ ತರುಣಿಯರಲ್ಲಿ ಅನೇಕರು ಮಯೂರವೀಣೆಯನ್ನು ಬಾಜಿಸುತ್ತಿದ್ದರೆ ಇನ್ನು ಕೆಲವರು ಮಯೂರ ಶಿರರೂಪದಿಂದ ಅಲಂಕರಿಸ್ಪಟ್ಟ ಕೊಳಲನ್ನು ಊದುತ್ತಿದ್ದಾರೆ. ಕೆಲವರು ಶ್ರುತಿಶುದ್ಧವಾಗಿ

 ISSN No : 2321-2519

ಷಡ್ಜದಲ್ಲಿ ಶ್ರೀಕೃಷ್ಣ ಧ್ಯಾನವನ್ನು ಮಾಡುತ್ತಿದ್ದಾರೆ. ಕೆಲವರು ಮಯೂರವೀಣೆಯಲ್ಲಿ, ಬಸಂತ್ ಬಹಾರ್ ರಾಗದಲ್ಲಿ ಭಜಾವಳಿ, ಉದಟಿ, ಉಗ್ರ ಮತ್ತು ಸಂಚಾರೀ ಗತಿಗಳಲ್ಲಿ ಮಯೂರತಾನವನ್ನು ನುಡಿಸುತ್ತಿದ್ದರೆ, ಇನ್ನು ಕೆಲವರು ಮಯೂರತಾಲದಲ್ಲಿ ರಚಿತವಾದ ಶಿಖಾಪದ ದ್ವಿಪಥಕ ಮಯೂರದೋಹಾ ಪ್ರಬಂಧವನ್ನು ಗಾಯನ ಮಾಡುತ್ತಿದ್ದಾರೆ. ಮಯೂರದಂತೆ ಅಲಂಕಾರಯುತ ವೈಭವದ ಆಹಾರ್ಯವನ್ನು ಧರಿಸಿದ, ಮಯೂರಹಸ್ತವನ್ನು ಹಿಡಿದ ನರ್ತಕರು ಮಂಡಲಾಕಾರದಲ್ಲಿ ಮಾಡಿದ ಮಯೂರಲಲಿತ ಕರಣದಿಂದ ನರ್ತಿಸುತ್ತಿದ್ದಾರೆ. ನರ್ತನವು ತಾನದ ಹಾಗೂ ಪ್ರಬಂಧದ ಮಾಯೂರೀಗತಿಯ ಲಯಕ್ಕೆ ತಕ್ಕಂತೆ ನಡೆಯುತ್ತಿದೆ. ಮಯೂರದಂತೆ ನರ್ತಿಸಿ ಕೃಷ್ಣನು ರಾಧೆಯನ್ನು ಸಂತಸಗೊಳಿಸುತ್ತಿದ್ದಾನೆ. ಈ ಸುಸಮಯವನ್ನು ವೀಕ್ಷಿಸಲೆಂದೇ ಆಗಸದಲ್ಲಿ ಸಕಲ ದೇವತೆಗಳೂ, ಗಂಧರ್ವಯಕ್ಷಕಿನ್ನರಕಿಂಪುರುಷಾದಿಗಳೂ, ಋಷಿಮುನಿಗಳೂ ನೆರೆದಿದ್ದಾರೆ. ಪುಷ್ಪವೃಷ್ಟಿಯೋ ಎಂಬಂತೆ ವರುಣನು ವರ್ಷ ಸಿಂಚನವನ್ನು ಮಾಡುತ್ತಿದ್ದಾನೆ. ಈ ಗೀತವಾದ್ಯನರ್ತನೋತ್ಸವದ ಧುನಿಯ ಆನಂದಾಮೃತವರ್ಷದಿಂದ ವ್ರಜವು ತೋಯ್ದಿದೆ. ಗಿಡಮರಗಳು ಚಿಗುರಿವೆ, ಪಶುಪಕ್ಷಿಗಳು ಜೊತೆಜೊತೆಗೇ ಗಾಯನ – ನರ್ತನಗಳನ್ನು ಮಾಡುತ್ತಿವೆ, ಯಮುನೆಯೂ ಆಲಿಸುತ್ತಾ, ತನ್ನ ಜುಳು ಜುಳು ನಿನಾದದ ಶ್ರುತಿಗೂಡಿಸುತ್ತ ಮಂದಗತಿಯಲ್ಲಿ ಹರಿಯುತ್ತಿದ್ದಾಳೆ. ಇಳೆಯು ಕೃಷ್ಣ ರಾಧೆಯರ ಮಯೂರನರ್ತನದ ಪಾದಗತಿಯ ಈ ಅಮೃತಕ್ಷಣಗಳ ಸಂಭ್ರಮಕ್ಕೆ ಸಾಕ್ಷಿಯಾಗಿದ್ದಾಳೆ.'

ಆಕರ ಋಣ

ಎಸ್. ವಿ. ಭೀಮಭಟ್ಟ –ಧನಂಜಯ ವಿರಚಿತಃ ದಶರೂಪಕಂ (ಮೂಲಶ್ಲೋಕಗಳ ಅನುವಾದ, ಧನಿಕಕೃತಾವಲೋಕಸಾರಸಹಿತ)

ಭೀಷ್ಮ ಕುಕರೆತೀಯವರ (BC. Kukareti)ಯವರ ಲೇಖನ – ಇಂಟರ್‌ನೆಟ್ ನಿಂದ.

ಡಾ. ಶಿವ ನಂದ ನೌಟಿಯಾಲ್ ಅವರ ಗೀತ

John Lockwood Kipling — Beast and Man in India.

ರಾ. ಸತ್ಯನಾರಾಯಣ –ಪುಂಡರೀಕಮಾಲಾ.

ರಾ.ಸತ್ಯನಾರಾಯಣ – ಕರ್ಣಾಟಕಸಂಗೀತವಾಹಿನಿ.

Nandita Krishna - Sacred Animals of India.
Dr. Vishnulok Bihari Srivastava
Dictionary of Indology : Detailed description of Indian Scriptures. Sanskrit
https://si.m.wikibooks.org/wiki/Mayura_Sandesa-INTRODUCTION
https://www.chinaodysseytours.com/special-topic-about-china/peacock-dance-of-dai-minority.html
https://www.revolvy.com/page/Peacock-dance

ಮಯೂರ ನೃತ್ಯದ ಕೆಲವು ವಿಡಿಯೋ ಅಂತರ್ಜಾಲ ಲಿಂಕ್‌ಗಳು

https://youtube/LvhBwwuEGS4
ಚೀನಾದೇಶದ ಮಯೂರ ನೃತ್ಯ –ಮಯೂರ ರಾಜಕುವರಿ ಯಾಂಗ್ ಲೀ ಪಿಂಗ್ ರವರಿಂದ.
https://youtu.be/4hJOOxkCcyU - ಚೀನಾ ದೇಶದ ಮಯೂರನೃತ್ಯ.
http://www.cctv.com/english/special/ethnicich/20090811/102399.shtml

https://youtu.be/69VDjpUBbz4 – ಆಫ್ರಿಕಾ ಖಂಡದ ಘಾನ ದೇಶದ ಮಯೂರನೃತ್ಯ.
https://youtu.be/iRSzXbHCbQY – ಲಿವಿಯಾ ವನವರ್‌ರವರ ಮಯೂರನೃತ್ಯ.
https://youtu.be/PtjZYWDnp6Y – ಚೈನಾ ದೇಶದ ಯುಗಳ ಮಯೂರನೃತ್ಯ.
https://youtu.be/Etm4Q2GKnsA ಮತ್ತು https://youtu.be/7c84w7J7eMs – ಇವೆರಡು ಲಿಂಕ್‌ಗಳು ಕಾಂಬೋಡಿಯಾದ 'ಷ್ಕೇರ್ ಪಿಲ್ಲೈನ್' ಮಯೂರನೃತ್ಯದವು.
https://youtu.be/Fbz4kKmO4_U – ಕಾಂಬೋಡಿಯಾದ ಮಯೂರನೃತ್ಯ.